ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अप्रैल-जून २०१६

त्रैमासिक पत्रिका



Scanned by CamScanner

# ಪರಿವಿಡಿ


೧. ಕನ್ನಡದ ಸಾಂಸ್ಕೃತಿಕ ರಾಯಭಾರಿ ಡಾ. ಬಸವರಾಜ ಜಗಜಂಪಿ • ಪ್ರೊ. ಬಿ. ಬಿ. ಡೆಂಗನವರ ೨೬

೨. ಹೊಯ್ಸಳರ ವಿಶಿಷ್ಟ ಸಾಮಂತ ಮನೆತನ 'ಮುಗಿಲಕುಲ' • ಪ್ರೊ. ವಿದ್ಯಾ ಹಡಗಲಿ
• ಡಾ. ಲೋಕೇಶ ೩೫

೩. ಶರಣರ ತತ್ತ್ವಾನುಭಾವ • ಡಾ. ಆರ್. ವಿ. ಪಾಟೀಲ ೪೧

೪. ಎಂಬತ್ನಾಲ್ಕರ ತಿರುವಿನಲ್ಲಿ ನಮ್ಮ ಚಿಟ್ಟಾಣಿ : ಹೀಗೊಂದು ಸಂವಾದ • ಶ್ರೀ ಸತೀಶ ಜಿ. ನಾಯ್ಕ ೪೪

೫. ಕನ್ನಡ ಜನಪದ ಗೀತೆಗಳಲ್ಲಿ ಬಸವ(ಊಳುವ ಎತ್ತು)
ಮತ್ತು ಜನಪದರ ಭಾಂದವ್ಯ • ಪ್ರೊ. ಶಿವಾನಂದ ಬ. ಟವಳಿ ೪೭

೬. ಜೈನ ರಾಮಾಯಣದ ವೈಶಿಷ್ಟ್ಯಗಳು • ಶ್ರೀಮತಿ ಮೀನಾಕ್ಷಿ ಪಾಟೀಲ ೫೦

೭. ಹಸ್ತಪ್ರತಿ ಸಂರಕ್ಷಣೆಯ ಪ್ರಾಚೀನ ವಿಧಾನಗಳು • ಬಾಣದ ಮಂಜುನಾಥ ೫೩

೮. ಶಿ.ಶಿ ಬಸವನಾಳರ ಸಂಪಾದನ ಸಾಹಿತ್ಯ • ಶ್ರೀನಿವಾಸ ದೊಡ್ಡಮನಿ ೫೭

೯. ಸರ್ವಧರ್ಮ ಸಮನ್ವಯಚಾರ್ಯ ಸಂತ ಶಿಶುನಾಳ ಶರೀಫ • ಡಾ. ಎಂ. ಎಸ್. ಮಾಗಣಗೇರಿ ೬೧

೧೦. ಭಯ • ರಮೇಶ ಪೋಖರಿಯಾಲ ೬೫
• ಎಸ್. ಟಿ. ಮೇರವಾಡೆ




Scanned by CamScanner

# ಕನ್ನಡದ ಸಾಂಸ್ಕೃತಿಕ ರಾಯಭಾರಿ ಡಾ. ಬಸವರಾಜ ಜಗಜಂಪಿ

• ಪ್ರೊ. ಬಿ. ಬಿ. ಡೆಂಗನವರ

"ಕನ್ನಡದ ಉಳಿಗವ ನೆಚ್ಚಿನಿಂದಲೇಗೈವ
ಬಳಗದ ಹಿರೇಮಣಿಯು
ಇವರೆ ನಮ್ಮೆಲ್ಲರ ಅಣ್ಣ ಬಸವಣ್ಣ
ನಿಚ್ಚವೂ ಕಾಯಕಕೆ ಕಾಯತೆತ್ತಿರುವ ಹಿರಿಯಣ್ಣ
ಇವರ ನಡೆನುಡಿ ಸಾಚಾ"

ಕರ್ನಾಟಕದ ಗಂಡುಮೆಟ್ಟಿನ ಸ್ಥಳ ಎಂದೇ ಪ್ರಖ್ಯಾತವಾಗಿರುವ ಬೆಳಗಾವಿ ಜಿಲ್ಲೆಯು ದಕ್ಷಿಣ ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದ ಸಂಗಮಸ್ಥಾನವಾಗಿದೆ. ಅಷ್ಟೇ ಅಲ್ಲದೆ ಸಹ್ಯಾದ್ರಿ ಪರ್ವತದ ಸುಸ್ಕೃಂತಿಯು ಬೆಳುವಲದ ಭವ್ಯತೆಯು ಮಿಲನವು ಜೊತೆಗೂಡಿ ಜಿಲ್ಲೆಯು ಸಾಮರಸ್ಯವನ್ನು ಮೈಗೂಡಿಸಿಕೊಂಡು ಬೆಳೆಯುತ್ತಿದೆ. ಇಂತಹ ವೈಶಿಷ್ಟ್ಯತೆಯನ್ನು ಹೊಂದಿರುವ ಬೆಳಗಾವಿಯಲ್ಲಿ ಅಪರೂಪದ ಕನ್ನಡದ ಕಾವಲುಗಾರ ಸರಳತೆ, ಸಜ್ಜನಿಕೆ, ಸಹೃದಯತೆಯಿಂದ ನಾಡಿನ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿರುವ ಡಾ. ಬಸವರಾಜ ಜಗಜಂಪಿಯವರು ಮಾಡುವ ಕೆಲಸದಲ್ಲಿ ಅತ್ಯಂತ ಶ್ರದ್ಧೆ, ನಿಷ್ಠೆ, ಭಕ್ತಿ, ಶಿಸ್ತು, ದಕ್ಷತೆ, ಪ್ರಾಮಾಣಿಕತೆ, ಸಮಯಪ್ರಜ್ಞೆ, ನಿರ್ಮಲವಾದ ಮನಸ್ಸು, ಬದ್ಧತೆ, ತುಡಿತ, ಕಳಕಳಿ, ಅರ್ಪಣಾಭಾವ ಈ ಎಲ್ಲ ಗುಣಗಳಿಂದ ನಾಡಿನ ಜನತೆಯ ಗಮನ ಸೆಳೆದ ಅಪರೂಪದ ವ್ಯಕ್ತಿಯಾಗಿದ್ದಾರೆ. ಜನಪದ ಸಾಹಿತ್ಯ-ಶರಣಸಾಹಿತ್ಯ ಹಾಗೂ ಸಾಂಸ್ಕೃತಿಕ, ಸಾಹಿತ್ತಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡು ವಿಶಿಷ್ಟವಾದ ಸೇವೆ ಸಲ್ಲಿಸುತ್ತಿರುವ ಅಪರೂಪದ ನಮ್ಮ ನಾಡಿನ ಹೆಮ್ಮೆಯ ಡಾ. ಬಸವರಾಜ ಜಗಜಂಪಿಯವರು ಶ್ರೇಷ್ಠ ಜಾನಪದ ವಿದ್ವಾಂಸರು, ಪ್ರತಿಭಾಸಂಪನ್ನರು, ಸಂಘಟನಾ ಚತುರರು, ಶ್ರೇಷ್ಠ ವಾಗ್ಮಿಗಳು ಕೂಡಾ ಆಗಿದ್ದಾರೆ. ಅವರ ಕಂಚಿನ ಕಂಠದಿಂದ ಮಾತುಗಳನ್ನಾಡಲು ಆರಂಭಿಸಿದರೆ ಶ್ರೋತೃಗಳ ಹೃದಯಕ್ಕೆ ಲಗ್ಗೆ ಹಾಕುವ ಐಂದ್ರಜಾಲಿಕ ಶಕ್ತಿ ಜಗಜಂಪಿಯವರಿಗೆ ಕರಗತವಾಗಿದೆ.

ಡಾ. ಬಸವರಾಜ ಜಗಜಂಪಿಯವರ ಪೂರ್ವಜರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಬಸಾಪುರದವರು ಇವರ ತಂದೆ ಕಲ್ಲಪ್ಪ ತಾಯಿ ಈರಮ್ಮ ಶರಣ ದಂಪತಿಗಳ ಮುದ್ದಿನ ಮಗನಾಗಿ ಬಸವರಾಜ ಅವರು ಬೆಳಗಾವಿಯಲ್ಲಿ ೨೫-೦೫-೧೯೫೦ರಲ್ಲಿ ಜನ್ಮತಾಳಿದರು. ಬಸವರಾಜರ ತಂದೆ ಕಲ್ಲಪ್ಪನವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಗಾಂದೀಜಿಯವರ ಅನುಯಾಯಿಗಳಾಗಿ ತಮ್ಮನ್ನು ದೇಶಸೇವೆಗೆ ಸಮರ್ಪಿಸಿಕೊಂಡವರು.

**ಜಗಜಂಪಿಯುವರ ಧರ್ಮಜೀವನ :** ಜೀವನ ಧರ್ಮಗಳ ಸಮನ್ವಯಿ, ನಾಡಿನ ಅಪರೂಪದ ಅಜಾತ ಶತೃ, ತಮ್ಮ ಅರಿವು ಆಚಾರಗಳಿಂದ ಎಲ್ಲರ ಹೃದಯ ಗೆದ್ದವರು. ಅಸ್ಖಲಿತಮಾತು, ಬಲಿತಭಾವ, ಕಳಿತ ಚಿಂತನಗಳ ಸಾಕಾರಮೂರ್ತಿ ಎಲ್ಲರ ಎದೆಯ ಹದದ ಹೊಲಕ್ಕೆಲ್ಲಾ ಶರಣ ಸಂಸ್ಕೃತಿಯ ಹೊನ್ನಬೀಜಗಳನ್ನು ಬಿತ್ತುತ್ತಲೇ ಬದುಕಿದ ನಮ್ಮ ಸಾಂಸ್ಕೃತಿಕ ರಾಯಭಾರಿ ಕನ್ನಡ ಸಾರಸ್ವತಲೋಕದಲ್ಲಿ ಜಗಜಂಪಿಯವರ ಹೆಸರು ಎದ್ದು ಕಾಣುವಂತದ್ದು ಅವರು ಗ್ರಾಮೀಣ ಸಂಸ್ಕೃತಿ, ಶರಣ ಸಂಸ್ಕೃತಿ ಹಾಗೂ ನಗರ ಸಂಸ್ಕೃತಿಗಳ ಕೂಡಲಸಂಗಮ. ಅವರದು ಅಪ್ಪಟ ಜಾನಪದ ಬದುಕು, ಸಾತ್ವಿಕ ಶರಣ ಜೀವನ, ಸುಸಂಸ್ಕೃತ ಸುಂದರ ವ್ಯಕ್ತಿತ್ವ ಮಾನವೀಯ ಅಂತಃಕರಣ ರಸಭರಿತ ದಯಾಹೃದಯಿ ಇವರ ನಡೆಚೆನ್ನ, ನುಡಿಚೆನ್ನ, ಸದುವಿನಯದ ಹೊಂಗಡ, ಮೃದುವಚನದ ಜೇಂಗೋಡ, ಪ್ರೀತಿವಾತ್ಸಲ್ಯ, ಸ್ನೇಹ, ಮಮತೆ ಸದಾ ಅವರ ಸಂಗಡ, ಮುಗಿದ ಕೈ, ನಿರಾಡಂಬರ ನಿರಹಂಕಾರ-



Scanned by CamScanner

ನಿಸ್ವಾರ್ಥ ನಿರ್ಮಲವಾದ ಮನ ತಮ್ಮ ಹೃದಯ ಶ್ರೀಮಂತಿಕೆಯಿಂದ ಎಲ್ಲರೊಂದಿಗೆ ಆತ್ಮೀಯ ಸಂಬಂಧವಿರಿಸಿಕೊಂಡವರು.

ಅವರ ಮಾತು ಮಾಣಿಕ್ಯ ಮಾತನಾಡಲು ನಿಂತರೆ ಹಸಿಗೋಡೆಯ ಮೇಲೆ ಹರಳಿಟ್ಟಷ್ಟು ಪರಿಣಾಮಕಾರಿ. ಯಾವುದೇ ವಿಷಯವಿರಲಿ ಸಂದರ್ಭಕ್ಕೆ ತಕ್ಕ ಸುಸಂಬದ್ಧ ಮಾತು, ಔಚಿತ್ಯಪೂರ್ಣ ದೃಷ್ಟಾಂತಗಳು, ಉಪಮೆ ರೂಪಕಗಳು, ಕಥೆ ಉಪಕಥೆಗಳು ಜೊತೆಗೆ ಸುಶ್ರಾವ್ಯವಾಗಿ ತ್ರಿಪದಿಗಳನ್ನು ಹಾಡುತ್ತ ಕೇಳುಗರ ಮನ ಹೃದಯ ಅರಳಿಸುವ ಆಪ್ತ ಆತ್ಮೀಯ ಶೈಲಿಯಿಂದ ಸಮ್ಮೋಹನ ಗೊಳಿಸುವ ಮಾಂತ್ರಿಕತೆ ಜಗಜಂಪಿಯವರಿಗೆ ಕರಗತವಾಗಿದೆ.

**"ಕನ್ನಡ ನುಡಿ ಸೇವೆಗೈಯುತ**
**ವಚನ ಸಾಹಿತ್ಯಕ್ಕೆ ಜೀವ ತೇಯ್ಯುತ**
**ಜಾನಪದ ನುಡಿ ಸೌಗಂಧವ ಎಲ್ಲೆಡೆ ಹರಡಿ**
**ಪರಿಮಳ ಸೂಸುವ ಗಂಧದ ಕೊರಡು"**

ಹೀಗೆ ನಾಡಸೇವೆ ನುಡಿಸೇವೆಗೈಯ್ಯುತ ಬೆಳಗಾವಿಯ ಗಡಿಭಾಗದಲ್ಲಿ ಸದ್ದಿಲ್ಲದೆ ಕಾಯಕ ನಿರಪೇಕ್ಷ ಭಾವನೆ ನಿರಾಡಂಬರ ಜೀವನ ಸಾಗಿಸುತ್ತ ನಾಡಿನ ಸಾಹಿತಿಗಳ ಮಠಾಧಿಪತಿಗಳ ಒಡನಾಡಿಗಳಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಬಿಡುವಿಲ್ಲದೆ ಕನ್ನಡತಾಯಿ ಭುವನೇಶ್ವರಿಯ ರಥದ ಸಾರಥಿಯಾಗಿ ಸಾಂಸ್ಕೃತಿಕ ರಾಯಭಾರಿಯಾಗಿ ಹಗಲಿರುಳು ಪರಿಶ್ರಮಿಸುತ್ತಿರುವುದು ಅವರ ಕಾರ್ಯಕ್ಷಮತೆಯನ್ನು ಭಾಷಾಭಿಮಾನವನ್ನು ಎತ್ತಿ ತೋರಿಸುತ್ತದೆ.

ಜಗಜಂಪಿಯವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರು, ಸಾತ್ವಿಕ ಸ್ವಭಾವದ ಸುಸಂಸ್ಕೃತ ವ್ಯಕ್ತಿತ್ವ ಇತರರ ಮನಸ್ಸನ್ನು ನೋಯಿಸಿದ ಮೃದು ಸ್ವಭಾವ ತಮ್ಮ ವ್ಯಾಪಕವಾದ ಅಧ್ಯಯನ ಶೀಲತೆಯಿಂದ ಸಹಜ ಶಾಂತ ಪ್ರವೃತ್ತಿಯಿಂದ ಸಾಹಿತ್ಯ ಕೃಷಿಯಲ್ಲಿ ವಿಶಿಷ್ಟ ಬೆಳಸನ್ನು ಕೊಟ್ಟವರು. ಅವರದು ಕಹಿ ಇಲ್ಲದ ನುಡಿ; ಕಪ್ಪಿಲ್ಲದ ನಡೆ, ವಿಷಯಗಳಿಗೆಳಸದನೋಟ, ಭಾವದಲ್ಲಿ ಸೌಮ್ಯತೆ, ಬುದ್ಧಿಯಲ್ಲಿ ಪ್ರಖರತೆ, ನಿರಂತರ ಅಧ್ಯಯನ ಅಭಿವ್ಯಕ್ತಿಯಲಿ ನಿಖರತೆ, ಸ್ಪಷ್ಟತೆ, ಅರಿಯದವರಿರಲಿ, ಅರಿತವರಿರಲಿ ಸಮವರ್ತನ ಭಾವ ಅವರ ಬದುಕು ಮುಂದಿನವರಿಗೆ ದಾರಿದೀಪ ಅನುಕರಣೀಯ ಅನುಸರಣೀಯ.

**ಶಿಕ್ಷಣ :** ಜಗಜಂಪಿಯವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಬೆಳಗಾವಿಯ ಬಿ. ಕೆ .ಮಾಡೆಲ್ ಹೈಸ್ಕೂಲದಲ್ಲಿ ಕಲಿತರು. ನಂತರ ಬಿ.ಎ.ಪದವಿ ಬೆಳಗಾವಿಯ ಪ್ರತಿಷ್ಠಿತ ಲಿಂಗರಾಜ ಕಾಲೇಜಿನಲ್ಲಿ ಪೂರೈಸಿದರು. ತದನಂತರ ೧೯೭೨ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ.ಕನ್ನಡ ಸ್ನಾತಕೋತ್ತರ ಪದವಿಯನ್ನು ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ಪಡೆದುಕೊಂಡರು. ೧೯೯೦ ರಲ್ಲಿ ಡಾ. ಎಸ್.ಎಸ್.ಕೋತಿನ ಅವರ ಮಾರ್ಗದರ್ಶನದಲ್ಲಿ "ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ" ಎಂಬ ವಿಷಯದ ಕುರಿತು ಸಂಶೋಧನಾ ಮಹಾ ಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಪಿ.ಎಚ್.ಡಿ.ಪದವಿಯನ್ನು ಪಡೆದುಕೊಂಡಿದ್ದಾರೆ. ಜಗಜಂಪಿಯವರು ಮೂರು ಜನ ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ. ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿ ವಿದ್ವತ್‌ಪೂರ್ಣ ಸಂಶೋಧನಾ ಮಹಾಪ್ರಬಂಧಗಳು ಹೊರ ಬರುವಲ್ಲಿ ತುಂಬಾ ಪರಿಶ್ರಮವಹಿಸಿದ್ದಾರೆ.

**ಶೈಕ್ಷಣಿಕ ಸೇವೆ :** ೧೯೭೨ರಲ್ಲಿ ಕರ್ನಾಟಕ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಹಗೂ ತಾವು ಕಲಿತ ಮಹಾವಿದ್ಯಾಲಯ ಕೆ.ಎಲ್.ಇ.ಲಿಂಗರಾಜ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದರು. ೧೯೭೪ ರ ವರೆಗೆ ಎರಡು ವರ್ಷ ಅವಧಿಯವರೆಗೆ ನಂತರ ೧೯೭೪ ರಿಂದ ನಿಪ್ಪಾಣಿಯ ಜಿ.ಡಿ. ಬಾಗೇವಾಡಿ ಪದವಿ ಮಹಾವಿದ್ಯಾಲಯಕ್ಕೆ ವರ್ಗವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗವಾದ ನಿಪ್ಪಾಣಿಯಲ್ಲಿ ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ಸಾಂಸ್ಕೃತಿಕ, ಕಲೆ, ಸಾಹಿತ್ಯ ಸೇವೆಗಳಿಂದ ತುಂಬಾ ಪ್ರಭಾವಿಶಾಲಿಗಳಾಗಿ ವಿದ್ಯಾರ್ಥಿ ಸಮೂಹಕ್ಕೆ ನೆಚ್ಚಿನ ಅಧ್ಯಾಪಕರಾಗಿ ಕನ್ನಡ ಕಟ್ಟುವ ಕಾರ್ಯದಲ್ಲಿ ಉತ್ಸಾಹದಿಂದ ದುಡಿದಂತಹವರು. ೧೯೮೬ ರಿಂದ ಸವದತ್ತಿಯ ಶ್ರೀಮಂತ ವ್ಹಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಅದ್ವಿತೀಯ ಕಾರ್ಯಚಟುವಟಿಕೆಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದವರು. ತಾಲೂಕಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಅನೇಕ ವಿನೂತನ ಕಾರ್ಯಕ್ರಮಗಳನ್ನು, ಸಮ್ಮೇಳನಗಳನ್ನು ಆಯೋಜಿಸಿ ಕನ್ನಡ ನುಡಿ ಸೇವೆಗೈದವರು.

೧೯೯೫ ರಿಂದ ೧೯೯೮ ರ ವರೆಗೆ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಮಹಾವಿದ್ಯಾಲಯಕ್ಕೆ ವರ್ಗಾವಣೆ ಹೊಂದಿ ಅಲ್ಲಿಯೂ ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಕನ್ನಡ ವಿಭಾಗವನ್ನು ಉತ್ತುಂಗಸ್ಥಿತಿಗೆ ಕೊಂಡೊಯ್ದುವರು. ಅಲ್ಲಿಯೂ ಕೂಡ ಸಾಹಿತ್ತಿಕ ಚಟುವಟಿಕೆಗಳಿಂದ ಕನ್ನಡ



Scanned by CamScanner

ವಿಭಾಗದ ಘನತೆಗೌರವವನ್ನು ಹೆಚ್ಚಿಸಿದವರು. ೧೯೯೮ ರಿಂದ ೨೦೦೮ ರ ವರೆಗೆ ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಪುನಃ ವರ್ಗಾವಣೆಗೊಂಡು ಬಂದ ಮೇಲೆ ಮಹಾವಿದ್ಯಾಲಯಕ್ಕೆ ಮತ್ತು ಕನ್ನಡ ವಿಭಾಗಕ್ಕೆ ಒಂದು ಕಳೆ ಬಂದಿತು. ತಮ್ಮ ಲೋಹಚುಂಬಕ ವ್ಯಕ್ತಿತ್ವದಿಂದ ಮಹಾವಿದ್ಯಾಲಯದ ಎಲ್ಲ ಸಿಬ್ಬಂದಿಯವರೊಂದಿಗೆ, ವಿದ್ಯಾರ್ಥಿಗಳೊಂದಿಗೆ, ಸಂಸ್ಥೆಯೊಂದಿಗೆ ಸ್ನೇಹದಿಂದ ತಮ್ಮ ಮಾತಿನ ಮೋಡಿಯಿಂದ ಎಲ್ಲರನ್ನು ಆಕರ್ಷಿಸಿ ಸಮ್ಮೋಹನಗೊಳಿಸಿದವರು. ಅವರ ಹಸನ್ಮುಖ, ಮಂದಹಾಸನಗೆ, ಮೃಧು ಮಧುರವಾದ ಮಾತುಗಳು, ಹಿರಿಯ ಕಿರಿಯ ಎಲ್ಲರೊಂದಿಗೆ ಆತ್ಮೀಯ ಒಡನಾಟದಿಂದ ಎಲ್ಲರೊಂದಿಗೆ ಆತ್ಮೀಯವಾಗಿ ಬೆರೆಯುವ ಸಹಜಸ್ವಭಾವದಿಂದ ಜಗಜಂಪಿಯವರೆಂದರೆ ಎಲ್ಲರಿಗೂ ಇಷ್ಟ ಎಂದೂ ಯಾರ ಮನನೋಯಿಸಿದವರಲ್ಲ.ಇವರ ಪ್ರತಿಭೆ, ಪಾಂಡಿತ್ಯ, ದೂರದೃಷ್ಠಿ, ನಯವಿನಯ ಕ್ರಿಯಾಶೀಲ ವ್ಯಕ್ತಿತ್ವ ಸೇವಾಜೇಷ್ಠತೆ ಕರ್ತವ್ಯಪ್ರಜ್ಞೆ ವಿದ್ಯಾರ್ಥಿಗಳ ಹಿತಾಸಕ್ತಿ, ಸಂಸ್ಥೆಯ ಏಳಿಗೆ, ಆಡಳಿತ ಸಾಮರ್ಥ್ಯ ಎಲ್ಲವನ್ನು ಗಮನಿಸಿದ ಸಂಸ್ಥೆಯವರು ೨೦೦೪ ರಲ್ಲಿ ಲಿಂಗರಾಜ ಕಾಲೇಜಿನ ಪ್ರಾಚಾರ್ಯ ಹುದ್ದೆಗೆ ನಿಯಮಿಸಿತು. ತಮ್ಮ ಸೇವಾ ಅನುಭವದಿಂದ ಮಹಾವಿದ್ಯಾಲಯಕ್ಕೆ ಒಂದು ಸ್ಪರ್ಷ ಕೊಟ್ಟವರು. ಇವರ ಸಮರ್ಥ ಮುಂದಾಳತ್ವದಲ್ಲಿ ಮಹಾವಿದ್ಯಾಲಯ ಅತ್ಯಂತ ಕಡಿಮೆ ಅವಧಿಯಲ್ಲಿ ನಿರೀಕ್ಷೆಗೂ ಮೀರಿ ಅಭಿವೃದ್ಧಿಯನ್ನು ಹೊಂದಿತು. ಇವರ ಆಡಳಿತಾವಧಿ ಅದೊಂದು ಪರ್ವಕಾಲ ಸುವರ್ಣಯುಗವೆಂದು ಹೇಳಿದರೆ ತಪ್ಪಾಗಲಾರದು. ಇವರ ಅಧಿಕಾರಾವಧಿಯಲ್ಲಿಯೇ ಲಿಂಗರಾಜ ಕಾಲೇಜು ಅಟೋನಮಸ್ ಕಾಲೇಜು ಆಗಿ ಪರಿವರ್ತನೆ ಹೊಂದಿ ಉನ್ನತ ದರ್ಜೆಗೇರಿತು. ಮಹಾವಿದ್ಯಾಲಯದ ಅಭಿವೃದ್ಧಿಯಾಗಬೇಕೆಂಬ ಕನಸುಹೊತ್ತು ಪ್ರಾಚಾರ್ಯರಾಗಿ ಬಂದವರು. ಅದಕ್ಕೋಸ್ಕರ ಹಗಲಿರುಳು ಅವಿರತವಾಗಿ ಪರಿಶ್ರಮಿಸಿ ಮಹಾವಿದ್ಯಾಲಯದಲ್ಲಿ ಒಂದು ಒಳ್ಳೆಯ ವಾತಾವರಣ ಮೂಡಿಸಿದವರು ತಮ್ಮ ಪಾರದರ್ಶಕವಾದ ಆಡಳಿತದಿಂದ ಸಾಧ್ಯ ಮಾಡಿದವರು.

ಒಟ್ಟಾರೆ ಮಹಾವಿದ್ಯಾಲಯಕ್ಕೆ ಕಾಯಕಲ್ಪನೀಡಿದವರು ಎಂದರೆ ಅತೀಶಯೋಕ್ತಿಯೆನಲ್ಲ. ಆಡಳಿತ ಮಂಡಳಿಯೊಂದಿಗೆ ಜಗಜಂಪಿಯವರು ಮಧುರವಾದ ಭಾಂಧವ್ಯ ಹೊಂದಿದವರು. ಡಾ. ಪ್ರಭಾಕರ ಕೋರೆ, ಶ್ರೀ. ಶಿವಾನಂದ ಕೌಜಲಗಿ, ಶ್ರೀ. ಮಹಾಂತೇಶ ಕವಟಗಿಮಠ ಇವರ ಜೊತೆ ಆತ್ಮೀಯ ಒಡನಾಟವಿದ್ದುದರಿಂದ ಸಂಸ್ಥೆಯ ಯಾವುದೇ ಕಾರ್ಯಚಟುವಟಿಕೆಗಳು ನಡೆಯಲಿ ಅಲ್ಲಿ ಜಗಜಂಪಿಯವರ ಉಪಸ್ಥಿತಿ ಇರಲೇಬೇಕು. ಅವರ ಸೂಕ್ತ ಮಾರ್ಗದರ್ಶನ ಸೂಕ್ತ ಸಲಹೆಗಳಿಂದ ಸಂಸ್ಥೆಯ ಅಭಿವೃದ್ಧಿ ಹಿತದೃಷ್ಟಿಯಿಂದ ಮಹಾನ್‌ಸಂಸ್ಥೆಯವರ ಜೊತೆ ಸ್ನೇಹವನ್ನು ವಿಶ್ವಾಸವನ್ನು ಉಳಿಸಿಕೊಂಡವರು ಗಳಿಸಿಕೊಂಡವರು ಹೀಗೆ ಸಂಸ್ಥೆಯವರ ಕಣ್ಗಾವಲಿನಲ್ಲಿ ಕಾಲೇಜನ್ನು ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಿ ೨೦೦೮ ರಲ್ಲಿ ಪ್ರಾಚಾರ್ಯ ಹುದ್ದೆಯಿಂದ ನಿವೃತ್ತಿ ಹೊಂದಿದರು.

ಆಯಿತು ಇನ್ನು ಮುಂದೆ ವಿಶ್ರಾಂತಿ ಜೀವನವನ್ನು ಕಳೆಯಬೇಕು. ಕುಟುಂಬದವರೊಂದಿಗೆ ನೆಮ್ಮದಿಯಿಂದ ಕಾಲಕಳೆಯಬೇಕೆಂದುಕೊಂಡು ಇರುವಾಗ ಮಹಾನ್ ಸಂಸ್ಥೆಯರ ಕರೆ ಬಂದಿತು. ನೀವು ಕೆ.ಎಲ್.ಇ. ಸಂಸ್ಥೆಯ ಮೆಡಿಕಲ್ ಕಾಲೇಜಿನ ಗ್ರಂಥಾಲಯದ ಆಡಳಿತಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಳ್ಳಬೇಕೆಂದು ವಿನಂತಿಸಿಕೊಂಡಾಗ ಸಂಸ್ಥೆಯವರು ತಮ್ಮ ಮೇಲೆ ಇರಿಸಿದ ಅಭಿಮಾನಕ್ಕೆ ಋಣಕ್ಕೆ ಪ್ರತಿಯಾಗಿ ಒಪ್ಪಿಕೊಂಡು ತಮ್ಮದಲ್ಲದ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಿದರು. ಅಲ್ಲಿಯೂ ಎಲ್ಲ ಸಿಬ್ಬಂದಿಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಮನಗೆದ್ದು ಉತ್ತಮವಾದ ಆಡಳಿತವನ್ನು ಕೊಟ್ಟರು. ಅದರಿಂದ ಸಂಸ್ಥೆಯವರು ತೃಪ್ತಿಪಟ್ಟರು. ಸತತ ನಾಲ್ಕು ವರ್ಷ ಅಲ್ಲಿ ಸೇವೆ ಸಲ್ಲಿಸಿ ಸ್ವಯಿಚ್ಛೆಯಿಂದ ೨೦೧೨ರಲ್ಲಿ ಆ ಹುದ್ದೆಯಿಂದ ಬಿಡುಗಡೆ ಹೊಂದಿದರು.

**ಸಮಾಜೋ–ಧಾರ್ಮಿಕ ಸೇವೆ :** ಇನ್ನೂ ಮೇಲಾದರು ನೆಮ್ಮದಿಯಿಂದ ಇರೋಣವೆಂದರೆ ನಾಡಿನ ಹಿರಿಯ ಗಣ್ಯ ಮಾನ್ಯರ ಮಠಾಧೀಶರು ಶಾಲೆ ಕಾಲೇಜು ಸಂಘ ಸಂಸ್ಥೆಗಳು ಸರಕಾರಿ ಅರೆಸರಕಾರಿ ಸಂಸ್ಥೆಗಳು ಕೂಡ ಅವರನ್ನು ಬಿಡುತ್ತಿಲ್ಲ. ಎಪ್ಪತ್ತರ ಇಳಿವಯಸ್ಸಿನಲ್ಲೂ ಅವರನ್ನು ನೆಮ್ಮದಿಯಿಂದಿರಲು ಬಿಡುತ್ತಿಲ್ಲ ಬಿಡುವಿಲ್ಲದ ಸಾಹಿತ್ಯ ಚಟುವಟಿಕೆಗಳು ಭಾಷಣ ಸಭೆಸಮಾರಂಭಗಳು ಗ್ರಂಥಸಂಪಾದನೆ ಲೇಖನಗಳ ತಿದ್ದುಪಡೆ ಹೀಗೆ ನೂರಾರು ಕೆಲಸ ಕಾರ್ಯಗಳು ಬಿಡುವಿಲ್ಲದ ಕಾರ್ಯಕ್ರಮಗಳು ಯಾರನ್ನು ನೋಯಿಸದೆ ಅವರ ಕರೆಯನ್ನು ನಿರಾಕರಿಸಲಾಗದೆ ಇಂತಹ ಇಳಿವಯಸ್ಸಿನಲ್ಲೂ ಪ್ರವಾಸ ಮಾಡುತ್ತಿರುತ್ತಾರೆ.

ಆತಿಥ್ಯ ಸತ್ಕಾರ್ಯದಲ್ಲಿಯೂ ಒಂದ ಹೆಜ್ಜೆ ಮುಂದೆ ಜಗಜಂಪಿಯವರ ಮನೆಗೆ ಯಾರೆ ಅತಿಥಿಗಳು, ಸ್ನೇಹಿತರು, ಬಂಧುಬಾಂಧವರು ಬಂದರೆ ಸಾಕು ಆತ್ಮೀಯತೆಯಿಂದ ಬರಮಾಡಿಕೊಂಡು ರಾಜಮರ್ಯಾದೆ ಪ್ರೀತಿಯಿಂದ ಸತ್ಕರಿಸಿ ಊಟ ಉಪಹಾರ ಮಾಡಿಸದೆ ಹಾಗೆ ಕಳಿಸುವದಿಲ್ಲ ಶ್ರೀಮತಿ



Scanned by CamScanner

ಜಗಜಂಪಿಯವರದು ಮಾತೃವಾತ್ಸಲ್ಯ ನಿರಹಂಕಾರಿಗಳು, ನಿಗರ್ವಿಗಳು ತಾಯಿ ಮಕ್ಕಳಿಗೆ ಮಮತೆಯಿಂದ ಉಣಬಡಿಸುವಂತೆ ಮುಂದೆ ಕುಳಿತು ನಗುನಗುತಾ ಹಸಿದು ಬಂದವರಿಗೆ ಅನ್ನಹಾಕಿ ಸಂತೃಪ್ತಿ ಪಡುತ್ತಾರೆ. ನಿಜವಾಗಿಯೂ ಆ ಮಹಾತಾಯಿ ಅನ್ನಪೂರ್ಣೇಶ್ವರಿ ಇದೇನು ಉತ್ಪ್ರೇಕ್ಷೆಯ ಮಾತಲ್ಲ ಸ್ವತಃ ನಾನು ಮತ್ತು ನನ್ನ ಗೆಳೆಯರು ಹಲವಾರು ಬಾರಿ ಜಗಜಂಪಿಯವರ ಮನೆಗೆ ಖುದ್ದಾಗಿ ಹೋಗಿ ಆ ಮಹಾತಾಯಿಯ ಕೈತುತ್ತು ಊಟಮಾಡಿದ ಸಂತೃಪ್ತಿ ನಮಗಿದೆ. ಅವರ ಆತಿಥ್ಯದಿಂದ ಮುಜುಗುರಪಟ್ಟಿದ್ದೇವೆ ಈ ಕಾಲದಲ್ಲಿಯೂ ಇಂತಹ ಪುಣ್ಯಾತ್ಮರಿದ್ದಾರಲ್ಲ ಎಂದು ಉದ್ಗಾರ ವೆತ್ತಿದ್ದೇವೆ. ಅತಿಥಿದೇವೋಭವ ಎನ್ನುವ ಮಾತಿಗೆ ಅಕ್ಷರಶಃ ಒಪ್ಪಿತರು ಇಂತಹ ನಿಷ್ಕಲ್ಮಶ ಮನಸ್ಸಿನಿಂದ ಆತಿಥ್ಯಸತ್ಕಾರ ಮಾಡುವ ಜನ ವಿರಳ ಅಂತಹ ವಿರಳರ ಸಾಲಿಗೆ ಜಗಜಂಪಿಯವರ ಕುಟುಂಬ ಸೇರುತ್ತದೆ. ಇಂದಿನ ದಿನಮಾನಗಳಲ್ಲಿ ಇಂತಹ ಕುಟುಂಬಗಳು ಸಿಗುವುದು ತುಂಬಾ ಅಪರೂಪ. ಮನೆಯ ಹೊಸ್ತಿಲವರೆಗೆ ಬಂದವರನ್ನು ಕರೆದು ಒಂದು ಲೋಟ ನೀರು ಕೊಡುವ ಸೌಜನ್ಯತೆ ಕೂಡ ಎಷ್ಟೋ ಜನರಿರುವುದಿಲ್ಲ ಮನೆಗೆ ಬಂದವರನ್ನು ಅಕ್ಕರೆಯಿಂದ ನಗುನಗುತ್ತಾ ಮಾತನಾಡಿ ಗೌರವದಿಂದ ಕಾಣುವ ಹೃದಯ ವೈಶಾಲ್ಯತೆ ಜಗಜಂಪಿಯವರ ಕುಟುಂಬಕ್ಕೆ ಮಾತ್ರ ಸಾಧ್ಯ ಎಂಬ ಅನಿಸಿಕೆ ನನ್ನದು. ಜಗಜಂಪಿಯವರಿಗೆ ಹತ್ತಿರದಲ್ಲಿರುವವರಿಗೆ ಮಾತ್ರ ನನ್ನ ಮಾತಿನ ಸತ್ಯಾಸತ್ಯತೆ ಅರ್ಥವಾದಿತು ಈ ವಿಷಯದಲ್ಲಿ ಜಗಜಂಪಿಯವರಿಗೆ ಜಗಜಂಪಿಯವರೆ ಸರಿಸಾಟಿ.

ಶ್ರೀಯುತ ಜಗಜಂಪಿಯವರ ವ್ಯಕ್ತಿತ್ವ ಸರ್ವಂಕಷ ವ್ಯಕ್ತಿತ್ವ ಅವರ ಮಾತುಗಳೆಂದರೆ ಪಾರಿಜಾತ ಪುಷ್ಪದಂತೆ ಅವರ ಮಾತುಗಳನ್ನು ಆಲಿಸಲು ನಾಡಿನ ಹೆಸರಾಂತ ಮಠಾದೀಶರು ಸಂಘಸಂಸ್ಥೆಯವರು ತವಕಿಸುತ್ತಾರೆ. ಅವರ ಪ್ರಭಾವ ಬೀರಿದ ಕೆಲವು ಉದಾಹರಣೆಗಳನ್ನು ಇಲ್ಲಿ ಮೆಲುಕು ಹಾಕಲು ಬಯಸುತ್ತೇನೆ. ಅವರು ಸಿರಿಗೇರಿ ತರಳು ಬಾಳು ಹುಣ್ಣಿಮೆ ಕಾರ್ಯಕ್ರಮಗಳಿಗೆ ಅಲ್ಲಿನ ಶ್ರೀಗಳು ಡಾ. ಜಗಜಂಪಿಯವರನ್ನು ಆಹ್ವಾನಿಸಿ ಅವರ ಉಪನ್ಯಾಸದ ಸವಿಯನ್ನು ಉಣಬಡಿಸುವ ಉತ್ಸುಕತೆ ಶ್ರೀಗಳದ್ದಾಗಿದೆ ಹಾಗೂ ಸಿದ್ಧಗಂಗೆಯ ಶಿವಕುಮಾರ ಮಹಾಸ್ವಾಮಿಗಳು ನಡೆಯಿಸುವ ಮಠದ ಕಾರ್ಯಕ್ರಮಕ್ಕೆ ಜಗಜಂಪಿಯವರ ಉಪಸ್ಥಿತಿ ಇರಲೇಬೇಕು ಗದುಗಿನ ತೋಂಟದಾರ್ಯ ಜಗದ್ಗುರುಗಳ ಶ್ರಾವಣಮಾಸದ ಪುಣ್ಯ ಕಾರ್ಯಕ್ರಮದಲ್ಲಿ ಒಂದು ದಿನದ ಉಪನ್ಯಾಸ ಜಗಜಂಪಿಯವರಿಗೆ ಮೀಸಲಿರುತ್ತದೆ. ಮೂಡಬಿದಿರೆಯಲ್ಲಿ ಮೋಹನ ಆಳ್ವಾಸರ ಆಳ್ವಾಸ್ ನುಡಿಸಿರಿಯಂತ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಕ್ಕೆ ಜರೂರಾಗಿ ಡಾ. ಜಗಜಂಪಿಯವರ ಹಾಜರಾತಿ ಬೇಕೆ ಬೇಕು ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಯಾವುದೇ ಕಾರ್ಯಕ್ರಮವಿರಲಿ ಅಲ್ಲಿನ ಶ್ರೀಗಳಾದ ಸಿದ್ಧರಾಮ ಮಹಾಸ್ವಾಮಿಗಳಿಗೆ ಜಗಜಂಪಿಯವರು ಇರಲೇಬೇಕು ಈ ಶತಮಾನದ ನಡೆದಾಡುವ ದೇವರೆಂದೆ ಜನಮಾನಸದಲ್ಲಿ ನಿತ್ಯಪೂಜೆಗೊಳ್ಳುತ್ತಿರುವ ವಿಜಯಪುರದ ಜ್ಞಾನಯೋಗಾಶ್ರಮದ ಪರಮಪೂಜ್ಯ ಪ್ರವಚನ ಪೀತಾಮಹ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರತಿ ವರ್ಷ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮದಲ್ಲಿ ಒಂದುದಿನ ಜಗಜಂಪಿಯವರು ಆಶ್ರಮಕ್ಕೆ ಬಂದು ತಮ್ಮ ಕಂಚಿನ ಕಂಠದಿಂದ ಜನಪದ ತ್ರಿಪದಿಗಳನ್ನು ಸುಶ್ರಾವ್ಯವಾಗಿ ಹಾಡಿ ತಮ್ಮ ವಿದ್ವತ್‌ಪೂರ್ಣ ಮಾತುಗಳನ್ನು ಸ್ವತಃ ಸಿದ್ಧೇಶ್ವರ ಶ್ರೀಗಳು ಆಲಿಸಿ ಆನಂದಪಡುತ್ತಾರೆ. ಅಂತಹ ಒಂದು ಸದಾವಕಾಶವನ್ನು ವಿಜಯಪುರ ಜನತೆಗೆ ಒದಗಿಸಿ ಎಲ್ಲರನ್ನು ಖುಷಿಪಡಿಸುತ್ತಾರೆ. ಹೀಗೆ ನಾಡಿನ ಧರ್ಮಗುರುಗಳ ಸಾಹಿತಿಗಳ ಹೃದಯ ಮಂದಿರದಲ್ಲಿ ವಿರಾಜಮಾನರಾಗಿರುವ ಆಕರ್ಷಕ ವ್ಯಕ್ತಿತ್ವ ಜಗಜಂಪಿಯವರಿಗಿದೆ.

**ಸಾಹಿತ್ಯ ಸೇವೆ :** ಡಾ. ಜಗಜಂಪಿಯವರು ಬೆಳಗಾವಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಗಡಿಜಿಲ್ಲೆಯಾದ ಬೆಳಗಾವಿಯಲ್ಲಿ ಹಿಂದೆಂದೂ ಆಗದ ಕೆಲಸ ಕಾರ್ಯಗಳನ್ನು ಸಮರೋಪಾದಿಯಲ್ಲಿ ಅವಿಸ್ಮರಣೀಯವಾದ ಕಾರ್ಯಚಟುವಟಿಕೆಗಳಿಂದ ಇಡೀ ಬೆಳಗಾವಿ ಕನ್ನಡಾಭಿಮಾನಿಗಳು ಸಾಹಿತ್ಯಾಸಕ್ತರು ಬೆರಗುಗಣ್ಣಿನಿಂದ ಸಾಹಿತ್ಯ ಪರಿಷತ್ತಿನ ಕಡೆ ಮುಖ ಮಾಡುವಂತೆ ಮಾಡಿದ್ದಾರೆ. ತಮ್ಮ ವಿನೂತನ ಕಾರ್ಯಚಟುವಟಿಕೆಗಳಿಂದ ಒಂದು ಸಾಹಿತ್ತಿಕ ವಾತಾವರಣವನ್ನು ನಿರ್ಮಾಣ ಮಾಡಿ ಅನೇಕ ಸಾಹಿತ್ಯ ಕೃತಿಗಳು ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಗೊಳಿಸಿ ಬೆಳಗಾವಿ ಸಾಹಿತಿಗಳನ್ನು ಬಳಸಿಕೊಂಡು ಹಿರಿಯ ಕಿರಿಯ ಸಾಹಿತಿ ಕವಿಗಳನ್ನು ನಾಡಿಗೆ ಪರಿಚಯಿಸುವ ಕಾರ್ಯವನ್ನು ಮಾಡಿ ಜನರ ಪ್ರೀತಿ ಪಾತ್ರಕ್ಕೆ ಬಾಜನರಾಗಿದ್ದಾರೆ. ಜೊತೆಗೆ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿಗಳಾಗಿ ತಾಲ್ಲೂಕಾ, ಜಿಲ್ಲಾಮಟ್ಟದ ಸಮ್ಮೇಳನಗಳನ್ನು ಆಯೋಜಿಸಿ ಶರಣಸಾಹಿತ್ಯ ಪರಿಷತ್ತಿಗೆ ಜೀವಂತಿಕೆಯನ್ನು ತಂದುಕೊಟ್ಟವರು. ಮರಾಠಿಗರ ಪ್ರಾಬಲ್ಯವಿರುವ ಪ್ರದೇಶದಲ್ಲಿ ಕನ್ನಡ ತಲೆ ಎತ್ತಿನಿಲ್ಲುವಂತೆ ಮಾಡಿದ ಹೆಗ್ಗಳಿಕೆ ಜಗಜಂಪಿಯವರದು.

ಇವರೊಬ್ಬ ಪ್ರಭುದ್ಧ, ಅಪ್ರತಿಮ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಪಾಠಬೋಧನೆ ಮಾಡಿದ ಪ್ರಭಾವಿ



Scanned by CamScanner

ಪ್ರಾಧ್ಯಾಪಕರು ಶ್ರೇಷ್ಠ ಜಾನಪದ ವಿದ್ವಾಂಸರು ವಚನ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಹಿರಿಯ ಅನುಭವಿಗಳು ಈ ಎಲ್ಲ ಅನುಭವವನ್ನು ಬಳಸಿಕೊಂಡು ತಮ್ಮ ಬರವಣಿಗೆಯನ್ನು ಹರಿತಗೊಳಿಸಿದವರು ಇವರು ಮೂವತ್ತು ವರ್ಷದ ಸುದೀರ್ಘ ಅನುಭವ ಹರಳುಗೊಂಡು ಸಾಹಿತ್ಯ ರೂಪದಲ್ಲಿ ಹೊರಹೊಮ್ಮಿ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಲು ಸಾಧ್ಯವಾಯಿತು. ಇವರ ಸಾಹಿತ್ಯವನ್ನು ಅವಲೋಕಿಸುತ್ತ ಹೋದರೆ ಒಂದು ದೊಡ್ಡದಾದ ಪಿ.ಎಚ್.ಡಿ. ಮಹಾಪ್ರಬಂಧ ಹೊರಬರುವಷ್ಟು ವಿಸ್ತೃತವಾದುದು ಅವರ ಕೆಲವು ಪ್ರಮುಖ ಕೃತಿಗಳ ಅವಲೋಕನ ಮಾಡಲು ಬಯಸುತ್ತೇನೆ.

೧. ಕನ್ನಡ ಸಾಹಿತ್ಯ ಹಾಗೂ ಜೀವನ ಮೌಲ್ಯಗಳು
೨. ಬಸವಪ್ರಸಾದ
೩. ಬಸವ ಪ್ರಭಪ್ಪನವರು-ಹಂಪಣ್ಣವರ
೪. ಮಲ್ಲಿಕಾರ್ಜುನದರ್ಶನ
೫. ಕನ್ನಡ ಕಾಯಕಯೋಗಿ ಶಿವಬಸವ ಸ್ವಾಮೀಜಿ
೬. ಕವಿ ಸಿದ್ಧನಂಜೇಶ
೭. ಕೆ.ಎಲ್.ಇ.ಸಂಸ್ಥೆ
೮. ಬಿ.ಎಂ.ಸಾಣಿಕೊಪ್ಪ
೯. ಬಸವರಾಜ ಹೊಸಮನಿ
೧೦. ಎಸ್.ಡಿ.ಇಂಚಲ
೧೧. ಸ್ಪಂದನ
೧೨. ನೂರುಬಣ್ಣ ನೂರುಬಿಂಬ
೧೩. ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ -ಭಾಗ-೨
೧೪. ಗುಣಾರ್ಣವ
೧೫. ಪ್ರಬಂಧ ಪರಿಮಳ
೧೬. ಬಯಲುಸಿರಿ
೧೭. ರಸಾಯನ
೧೮. ಶ್ರೀಗುರು
೧೯. ಅರಳು
೨೦. "ಗರುಡ ಸದಾಶಿವರಾಯರ ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ"(೧೯೮೯)
೨೧. ನಂಬಿಕೆಗಳು (೨೦೧೫)
೨೨. ಬೆಳಕಿನತ್ತ (ಚಿಂತನಗಳ ಗುಚ್ಛ) (೨೦೧೫)

ಹೀಗೆ ಡಾ. ಜಗಜಂಪಿಯವರು ಐವತ್ತಕ್ಕೂ ಹೆಚ್ಚು ಜೀವನ ಚರಿತ್ರೆಗಳನ್ನು ಸಂಪಾದಿತ ಕೃತಿಗಳನ್ನು ಅಭಿನಂದನಾ ಕೃತಿಗಳನ್ನು ವ್ಯಕ್ತಿ ಚಿತ್ರಗಳನ್ನು, ಜೀವನ ಚರಿತ್ರೆಗಳನ್ನು ತಮ್ಮ ಅನುಭವದ ಮೂಸೆಯಲ್ಲಿ ಮೂಡಿಬಂದ ಕೃತಿ ಕುಸುಮಗಳನ್ನು ಕನ್ನಡಿಗರ ಕೈಗಿತ್ತು ಕೃತಾರ್ಥರಾಗಿದ್ದಾರೆ.

**ಗರುಡಸದಾಶಿವರಾಯ ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ :** ಜಗಜಂಪಿಯವರ ಪ್ರಸ್ತುತ ಪಿ.ಎಚ್.ಡಿ. ಮಹಾಪ್ರಬಂಧ ಹಲವಾರು ಮಹತ್ವದ ಗುಣ-ವೈಶಿಷ್ಟ್ಯಗಳಿಂದ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. ಗರುಡ ಸದಾಶಿವರಾಯರು ಪ್ರಯೋಗಶೀಲ ಪ್ರತಿಭಾವಂತ ಕಲಾವಿದರು ವೈವಿಧ್ಯಮಯವಾದ ಕೊಡುಗೆಯನ್ನಿತ್ತ ಸಂಕೀರ್ಣ ವ್ಯಕ್ತಿತ್ವದ ಗರುಡರು ತಮ್ಮನ್ನು ಸದಾ ಒಂದಿಲ್ಲೊಂದು ಕಠೋರ ಪರೀಕ್ಷೆಗೆ ಗುರುಪಡಿಸಿಕೊಳ್ಳುತ್ತ ಬಂದ ಪ್ರಯೋಗಶೀಲರು. ಅತೀ ದೊಡ್ಡ ಸಾಹಸಿಗರು ಹಲವಾರು ಅತಿರೇಕಗಳಲ್ಲಿ ಆಡಂಬರಗಳಲ್ಲಿ ತನ್ನನ್ನೇ ತಾನು ಕಳೆದಿಕೊಳ್ಳುತ್ತಲಿದ್ದ ವೃತ್ತಿರಂಗಭೂಮಿಯಲ್ಲಿ ಒಂದು ಹೊಸ ಪರಂಪರೆಯನ್ನು ನಿರ್ಮಿಸಿದ ಶ್ರೇಯಸ್ಸು ಗರುಡರದು. ತನ್ನ ನೂರು ವರುಷಗಳ ಚರಿತ್ರೆಯಲ್ಲಿ ಹಲವಾರು ಘಟ್ಟಗಳನ್ನು ಮೆಟ್ಟಿ ಬೆಳೆದುಬಂದ ಕರ್ನಾಟಕ ವೃತ್ತಿರಂಗಭೂಮಿಯಲ್ಲಿ ನಟರಾಗಿ ನಾಟ್ಯಾಚಾರ್ಯರಾಗಿ, ನಾಟಕಕಾರರಾಗಿ, ಯಜಮಾನನಾಗಿ ಮತ್ತು ರಂಗಸುಧಾರಕರಾಗಿ ಗರುಡ ಸದಾಶಿವರಾಯರು ಒಂದು ವಿಶಿಷ್ಟ ಪರಂಪರೆಯ ನಿರ್ಮಾಣಕ್ಕೆ ಕಾರಣರಾದವರು. ರಂಗ ಸಾಹಿತ್ಯ ಹಾಗೂ ರಂಗಪ್ರಯೋಗ ಈ ಎರಡೂ ದೃಷ್ಟಿಯಿಂದ ಅವರು ಕ್ರಾಂತಿ ಗೈದವರು.

ಗರುಡ ಸದಾಶಿವರಾಯರ ಜೀವನ ಸಾಧನೆ ಅವರ ದತ್ತಾತ್ರೆಯ ಮಂಡಳಿಯನ್ನು ಅಭ್ಯಾಸ ಮಾಡುವದೆಂದರೆ ನಮ್ಮ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಒಂದು ಕಾಲು ಘಟ್ಟದ ಒಂದು ಮಹತ್ವದ ಪರಂಪರೆಯ ಅಧ್ಯಯನವೆಂದೇ ಹೇಳಬೇಕು ಇಂಥ ಗಟ್ಟಿ ವಿಷಯವನ್ನು ಎತ್ತೊಕೊಂಡು ಅಧ್ಯಯನ ನಡೆಸಿ ಅದರ ಸತ್ವವನ್ನು ಕೊಟ್ಟ ಜಗಜಂಪಿಯುವರು ನಿಜಕ್ಕೂ ಅಭಿನಂದನಾರ್ಹರಾಗಿದ್ದಾರೆ. ಸಾಹಿತ್ಯದ ಅಧ್ಯಾಪಕರಾಗಿರುವ ಜಗಜಂಪಿಯವರು ಗರುಡರ ನಾಟಕ ಕೃತಿಗಳನ್ನು ರಂಗಭೂಮಿ ಹಾಗೂ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿಯೇ ಮೌಲ್ಯಮಾಪನ ಮಾಡಿದ್ದಾರೆ. ವೃತ್ತಿರಂಗಭೂಮಿಯ ನಾಟಕ ಸಾಹಿತ್ಯವನ್ನು ಅಸಡ್ಡೆಯಿಂದ ಕಾಣುವವರಿಗೆ ಗರುಡರ ನಾಟಕಗಳು ಹೇಗೆ ಉತ್ತರವಾಗಿ

ನಿಲ್ಲಬಲ್ಲವು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ೧೯೮೯ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿ.ಎಚ್.ಡಿ. ಮಹಾಪ್ರಬಂಧ ಇದಾಗಿದೆ. ತಮ್ಮ ಸಂಶೋಧನಾತ್ಮಕ ಆಲೋಚನೆಗಳಿಂದ ರಂಗಭೂಮಿಯ ಕುರಿತು ಎಳೆಎಳೆಯಾಗಿ ಓದುಗರ ಮುಂದೆ ಬಿಚ್ಚಿಟ್ಟಿದ್ದಾರೆ.

**ನೂರುಬಣ್ಣ ನೂರುಬಿಂಬ :–** ಈ ಕೃತಿಯು ಏಣಗಿ ಬಾಳಪ್ಪನವರ ಅಭಿನಂದನಾ ಚಿತ್ರ ಸಂಪುಟ–ಏಣಗಿ ಬಾಳಪ್ಪನವರ ಜನ್ಮ ಶತಮಾನೋತ್ಸವ ನಿಮಿತ್ಯ ೨೦೧೩ ರಲ್ಲಿ ಪ್ರಕಟಗೊಂಡ ವಿಶಿಷ್ಟವಾದ ಬಾಳಪ್ಪನವರ ಬಣ್ಣದಬದುಕಿನ ಕಲಾವೈಭವವನ್ನು ಕುರಿತ ನೂರಾರು ಚಿತ್ರಗಳ ಅನಾವರಣಗೊಳ್ಳುವುದರೊಂದಿಗೆ ಏಣಗಿಯವರ ಅರ್ಧಶತಕಕ್ಕೂ ಹೆಚ್ಚು ರಂಗಭೂಮಿಯ ಬದುಕಿನ ವಿವಿಧ ಆಯಾಮಗಳನ್ನು ಕುರಿತು ಬರೆದ ಲೇಖನಗಳನ್ನು ಒಳಗೊಂಡಿರುವ ಈ ಕೃತಿಯ ಕುರಿತು ಒಂದೆರಡು ಮಾತುಗಳನ್ನು ಹೇಳಲೇಬೇಕು.

ಬೆಳಗಾವಿ ಜಿಲ್ಲೆ ಕರ್ನಾಟಕ ವೃತ್ತಿರಂಗಭೂಮಿಯ ತವರುಮನೆ ರಂಗಕರ್ಮಿಗಳನ್ನು ನಾಡಿಗೆ ಕೊಡುಗೆಯಾಗಿ ನೀಡಿದ ಹೆಮ್ಮೆ ಈ ಜಿಲ್ಲೆಗಿದೆ. ನಾಟಕ ಕ್ಷೇತ್ರದಲ್ಲಿ ನಾಟ್ಯಭೂಷಣ ಏಳಗಿ ಬಾಳಪ್ಪನವರದು ಅವಿಸ್ಮರಣೀಯವಾದ ಹೆಸರು ಸವದತ್ತಿ ತಾಲ್ಲೂಕಿನ ಹೆಮ್ಮೆಯ ಪುತ್ರರಾದ ಏಣಗಿ ಬಾಳಪ್ಪನವರು ರಂಗಭೂಮಿಗೆ ಜೀವ ಧ್ವನಿಯಾದವರು. ಕನ್ನಡ ಕಟ್ಟುವ ಕೆಲಸ ಮಾಡಿದ ಏಣಗಿಯವರು ತಾವೂ ಬೆಳೆದು ಸಹಕಲಾವಿಧರನ್ನು ಬೆಳೆಸಿದವರು. ತಮ್ಮ ಆದಾಯದ ಒಂದಿಷ್ಟು ಭಾಗವನ್ನು ಸಾಮಾಜಿಕ ಸೇವೆಗಾಗಿ ಮೀಸಲಿಟ್ಟು ಸಮಾಜಮುಖಿ ಕೆಲಸವನ್ನು ಮಾಡಿದರು. ಬಾಲನಟರಾಗಿ ರಂಗಪ್ರವೇಶಿಸಿ ಗಾಯಕ, ನಟ, ನಿರ್ದೇಶನದ ಮೂಲಕ ರಂಗಗಾಯನ, ಅಭಿನಯ ಸಂಘಟನಾ ಸಾಮರ್ಥ್ಯಗಳಿಂದ ಅಗಾಧ ನೆನಪಿನ ಶಕ್ತಿಯಿಂದ ಅವರೊಬ್ಬ ನಡೆದಾಡುವ ವೃತ್ತಿರಂಗಭೂಮಿ ಎಂದೇ ಅವರನ್ನು ಗುರುತಿಸಲಾಗುತ್ತದೆ. ಕಿತ್ತೂರ ಚೆನ್ನಮ್ಮ, ರುದ್ರಮ್ಮ, ಹೇಮರೆಡ್ಡಿ ಮಲ್ಲಮ್ಮ, ಲಂಕಾದಹನ, ಕುರುಕ್ಷೇತ್ರ ಇತ್ಯಾದಿ ನಾಟಕಗಳಲ್ಲಿ ಬಾಳಪ್ಪನವರು ಸ್ತ್ರೀಪಾತ್ರದಲ್ಲಿ ಅಭಿನಯಿಸಿ ಜನಮನಸೂರೆಗೊಂಡವರು ಮೊದಮೊದಲು ಸ್ತ್ರೀಭೂಮಿಕೆಯಲ್ಲಿ ಕಾಣಿಸಿಕೊಂಡು ಸ್ವಂತ ನಾಟಕ ಕಂಪನಿ ಕಟ್ಟಿ ಆ ನಾಟಕಗಳಲ್ಲಿ ಪುರುಷಪಾತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಹೇಮರೆಡ್ಡಿ ಮಲ್ಲಮ್ಮ ಬಾಳಪ್ಪನವರ ಸ್ತ್ರೀಪಾತ್ರಗಳಲ್ಲಿಯೇ ಅತೀ ಹೆಚ್ಚು ಜನ ಪ್ರೀಯವಾದುದು ಹಾಗೇ ಜಗಜ್ಯೋತಿ ಬಸವೇಶ್ವರ ಪುರುಷ ಪಾತ್ರವೂ ಕೂಡ ಜನ ಮೆಚ್ಚುಗೆಯನ್ನು ಪಡೆದು ಬಾಳಪ್ಪನವರಿಗೆ ಹೆಸರು ತಂದುಕೊಟ್ಟಿತು ಇವೆರಡು ಪಾತ್ರಗಳಿಂದ ಬಾಳಪ್ಪನವರಿಗೆ ತಾರಾಮೌಲ್ಯ ಪ್ರಾಪ್ತವಾಯಿತು. ಇವತ್ತಿಗೂ ಈ ಎರಡು ಪಾತ್ರಗಳಿಂದ ಜನಮಾನಸದಲ್ಲಿ ಹಚ್ಚುಹಸುರಾಗಿದ್ದಾರೆ. ಕನ್ನಡ ರಂಗಕಲೆಯ ಸಿರಿವಂತಿಕೆಯನ್ನು ಹೆಚ್ಚಿಸಿದ ಏಣಗಿಬಾಳಪ್ಪನವರ ಬಣ್ಣದ ಬದುಕನ್ನು ಕುರಿತು ಕನ್ನಡ ರಂಗಭೂಮಿಯ ಕೌಶಲ್ಯವನ್ನು ಹೊಂದಿರುವ ಬಾಳಪ್ಪನವರ ಕುರಿತು ಕಲಾಸಕ್ತ ವಿದ್ವಾಂಸರು ಅಭಿಮಾನಿಗಳು ಬಂಧುಬಾಂಧವರು ಆಡಿದ ಅಭಿಮಾನದ ಮಾತುಗಳನ್ನು ಕಲಾವೈಭವದ ವರ್ಣರಂಜಿತ ಚಿತ್ತಾರದ ಚಿತ್ರಗಳನ್ನು ಸಂಗ್ರಹಿಸಿ ಒಂದು ಸುಂದರವಾದ ಚಿತ್ರಸಂಪುಟವನ್ನು ನಾಡಿನ ಹೆಸರಾಂತ ಜಾನಪದ ವಿದ್ವಾಂಸರಾದ ಡಾ. ಬಸವರಾಜ ಜಗಜಂಪಿಯವರು ತುಂಬಾ ಅರ್ಥವತ್ತಾದ ತಲೆಬರಹದೊಂದಿಗೆ ಸಂಗ್ರಹಿಸಿ ಸಂಪಾದಿಸಿ ಸಹೃದಯ ಜದುಗರ ಕೈಗೆ ಕೊಟ್ಟು ಕೃತಾರ್ಥರಾಗಿದ್ದಾರೆ. ಅವರ ಶ್ರಮ ಸಾರ್ಥಕಗೊಂಡಿದೆ.

**ಮಲ್ಲಿಕಾರ್ಜುನ ದರ್ಶನ :** ಮಲ್ಲಿಕಾರ್ಜುನ ದರ್ಶನವನ್ನು ೧೯೯೮–೯೯ ನೆಯ ಶೈಕ್ಷಣಿಕ ವರ್ಷದಿಂದ ಮೂರು ವರ್ಷದ ಅವಧಿಗೆ ಬಿ.ಎ. ಭಾಗ–೩ ರ ಆವಶ್ಯಕ ಪತ್ರಿಕೆಯ ಪಠ್ಯವೆಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಮಂಡಳಿಯು ಆಯ್ಕೆ ಮಾಡಿದ ಹಿನ್ನೆಲೆಯಲ್ಲಿ ಹಿರಿಯ ಸಾಹಿತಿಗಳಾದ ಡಾ. ಬಸವರಾಜ ಜಗಜಂಪಿಯವರಿಗೆ ಈ ಕಾರ್ಯವನ್ನು ನೀಡಲಾಯಿತು. ಡಾ. ಜಗಜಂಪಿಯವರು ತಮ್ಮ ವಿದ್ವತ್ತು ಪ್ರತಿಭೆ ಮತ್ತು ಪಾಂಡಿತ್ಯ ಅನುಭವಗಳನ್ನು ಬಳಸಿಕೊಂಡು ರಾಘವಾಂಕ ಮಹಾಕವಿಯ ಸಿದ್ಧರಾಮ ಚಾರಿತ್ರ್ಯ ಕೃತಿಯನ್ನು ತಲಸ್ಪರ್ಷಿಯಾಗಿ ಅಭ್ಯಸಿಸಿ ಸಿದ್ಧರಾಮನ ಜನನ ಬಾಲ್ಯ ಮಲ್ಲಿಕಾರ್ಜುನನ ದರ್ಶನ ಪವಾಡಗಳನ್ನು ಆ ಕೃತಿಯಲ್ಲಿ ರಾಘವಾಂಕನ ಪ್ರತಿಭಾ ಸಾಮರ್ಥ್ಯದಿಂದ ಹೊರಹೊಮ್ಮಿದ ಕರುಣ, ಭಕ್ತಿ, ಶಾಂತರಸಗಳ ಮಡುಗಟ್ಟಿನಿಂತಿರುವದನ್ನು ತುಂಬಾ ಸೊಗಸಾಗಿ ನಿರೂಪಿಸಿರುವದನ್ನು ಕಾಣಬಹುದಾಗಿದೆ.

ರಾಘವಾಂಕನು ಸಿದ್ಧರಾಮ ಚಾರಿತ್ರ್ಯವನ್ನು ನಾಟಕೀಯ ಶೈಲಿಯಲ್ಲಿ ಕಾವ್ಯರಚಿಸಿದ ರೀತಿ ನಿಜಕ್ಕೂ ಲಕ್ಷಿಸುವಂತಹದ್ದು ಅವನ ನಾಟಕೀಯ ಶೈಲಿಗೆ ಒಂದು ಉದಾಹರಣೆ ನವಣೆಯ ಹೊಲದಲ್ಲಿ ನಡೆಯುವ ಮಲ್ಲಿಕಾರ್ಜುನ–ಸಿದ್ಧರಾಮರ ಸಂಬಾಷಣೆ ಕಾವ್ಯದ ಕೊನೆಯಲ್ಲಿ ಬರುವ ಸಿದ್ಧರಾಮ ಅಲ್ಲಮರ ಸಂಬಾಷಣೆಗಳು ರಾಘವಾಂಕನ ನಾಟ್ಯ ಪ್ರತಿಭೆಯು ಉಜ್ವಲ



Scanned by CamScanner

ಉದಾಹರಣೆಗಳಾಗಿವೆ. ಮಲ್ಲಯ್ಯನ ಮನೋಹರ ಮೂರ್ತಿಯನ್ನು ಕಾಣುವ ಅನನ್ಯ ಹಂಬಲ ಅವನದು ಮಲ್ಲಯ್ಯನ ದರ್ಶನವನ್ನು ಪಡೆದು ಸತ್ಯಶುದ್ಧಕಾಯಕದಿಂದ ಮುಕ್ತಿಸಾಧ್ಯವೆಂಬುದನ್ನು ಸಾಧಿಸಿ ತೋರಿಸಿದ ಸಿದ್ಧರಾಮನ ದೈವಭಕ್ತಿಯನ್ನು ಸಿದ್ಧರಾಮನು ಶಿವಸಾಕ್ಷಾಧಾರವನ್ನು ಮಾಡಿಕೊಂಡು ಶ್ರೀಶೈಲ್ ಪರ್ವತದಿಂದ ಸೊನ್ನಲಗಿಗೆ ಬಂದು ಜನಸೇವೆ ಮಾಡುತ್ತ ಕೆರೆಕಾಲುವೆ ಕಟ್ಟಿಸಿ ಸಮಾಜೋ-ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ನಿರತನಾಗಿರುವುದನ್ನು ಜಗಜಂಪಿಯವರು ಕವಿಪರಿಚಯ, ಕೃತಿಪರಿಚಯ, ಪ್ರಸ್ತಾವನೆ, ಕಠಿಣ ಶಬ್ದಾರ್ಥಗಳ ವಿವರಣೆ ತುಂಬಾ ಸ್ಪಷ್ಟವಾಗಿ ಬರೆದು ಇದೊಂದು ಮಾದರಿಯ ಪಠ್ಯಪುಸ್ತಕವನ್ನಾಗಿ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹಾಗೂ ಅಧ್ಯಾಪಕ ಮಿತ್ರರ ಕೈಗೆ ನೀಡಿದ್ದಾರೆ ಮುಂದೆ ಬರುವ ಪ್ರಾಧ್ಯಾಪಕರಿಗೆ ಇದೊಂದು ಮಾದರಿ ಪಠ್ಯಕ್ರಮವಾಗಿದೆ, ರಾಜ್ಯ ಮತ್ತು ರಾಷ್ಟ್ರರಾಜಕಾರಣದಲ್ಲಿ ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವದಿಂದಾಗಿ ದೇಶದ ಗಮನ ಸೆಳೆದ.

ಸ್ಪಂದನ : ಮಹಾಮುತ್ಸದ್ದಿ ಸಂಘಟನೆಕಾರ, ಕ್ರಿಯಾಶೀಲ ವ್ಯಕ್ತಿತ್ವದ ಡಾ. ಪ್ರಭಾಕರ ಕೋರೆಯವರ ೫೦ ವರ್ಷ ತುಂಬಿದ ಶುಭಸಂದರ್ಭದಲ್ಲಿ ೨೦೦೭ ರಲ್ಲಿ ೪೨ ಲೇಖನಗಳನ್ನು ಒಳಗೊಂಡ ಸ್ಪಂದನ ಬೆಳಕು ಕಂಡಿತು. ಭಾರತದ ಶೈಕ್ಷಣಿಕ ಚರಿತ್ರೆಯಲ್ಲಿ ೧೯೧೬ ಅತ್ಯಂತ ಮಹತ್ವದ ವರ್ಷ ಅದು ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ ಸ್ಥಾಪನೆಗೊಂಡ ವರ್ಷವೂ ಆಗಿದೆ. ಇಲ್ಲಿಂದ ದೇಶದ ಶೈಕ್ಷಣಿಕ ನಕ್ಷೆಯೇ ಬದಲಾಗುತ್ತ ಹೋಯಿತು. ಆಯಾ ಪ್ರಾಂತದಲ್ಲಿ ದೊಡ್ಡದೊಡ್ಡ ಶಿಕ್ಷಣ ಸಂಸ್ಥೆಗಳು ಬೆಳೆದು ನಿಂತವು. ಇವುಗಳಲ್ಲಿ ಕೆ.ಎಲ್.ಇ. ಯೂ ಒಂದಾಗಿದೆ. ಕೆ.ಎಲ್.ಇ. ಕನ್ನಡಿಗರು ದೇಶಕ್ಕೆ ನೀಡಿದ ಬಹುದೊಡ್ಡ ಕೊಡುಗೆಯಾಗಿದೆ. ಬೆಳಗಾವಿಯಲ್ಲಿ ಏಳುಜನ ಪದವಿಧರ ಯುವಕರು ಉದಾತ್ತಧ್ಯೇಯವನ್ನಿಟ್ಟುಕೊಂಡು ರಾವ್ ಬಹದ್ದೂರ ಅರಟಾಳ ರುದ್ರಗೌಡರ ನೇತೃತ್ವದಲ್ಲಿ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯನ್ನು ಸ್ಥಾಪಿಸುವ ನಿರ್ಧಾರ ಮಾಡಿದರು. ೧೯೧೬ ರಲ್ಲಿ ಶಿ.ಶಿ. ಬಸವನಾಳರು ಎಂ.ಎ.ಪದವೀಧರರಾಗಿ ಬಂದಮೇಲೆ ಸರ್ವಶ್ರೀ ಪಿ.ಆರ್.ಚಿಕ್ಕೋಡಿ, ಶ್ರೀ. ಬಿ.ಬಿ. ಮಮದಾಪೂರ, ಎಂ.ಆರ್. ಸಾಖರೆ, ಶ್ರೀ ಬಿ.ಎಸ್. ಹಂಚಿನಾಳ, ಎಚ್.ಎಫ್.ಕಟ್ಟಿಮನಿ ಮತ್ತು ಬಿ.ಆರ್.ಪಾಟೀಲ ಹೀಗೆ ಒಟ್ಟು ಏಳು ಜನರು ಸಭೆಸೇರಿ ಎಲ್ಲರೂ ಚರ್ಚಿಸಿ ಆಲೋಚಿಸಿ ಒಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ನಿರ್ಧಾರ ಮಾಡಿದರು. ಸಂಸ್ಥೆಯು ಡೆಕ್ಕನ್ ಎಜುಕೇಶನ್ ಸೊಸಯಿಟಿಯ ಮಾದರಿಯಂತೆ ಇರಬೇಕೆಂದು ನಿರ್ಧರಿಸಿದರು. ಬಿ.ಎಲ್.ಪಾಟೀಲರು ತೊಂದರೆಗಳಿಂದ ಹೊರಗುಳಿದರು. ಶ್ರೀ.ಎಂ.ಆರ್. ಸಾಕರೆಯವರನ್ನು ಸೆಕ್ರೆಟರಿ ಎಂದು ನಿಯಮಿಸಲಾಯಿತು. ಈ ನಿರ್ಧಾರ ಚಾರಿತ್ರಿಕ ದೃಷ್ಟಿಯಿಂದ ತುಂಬಾ ಮಹತ್ವದ್ದಾಯಿತು. ಮರಾಠಿಗರ ಪ್ರಾಬಲ್ಯವಿರುವ ಬೆಳಗಾವಿಯಲ್ಲಿ ಕನ್ನಡಿಗರ ಪ್ರಾಬಲ್ಯ ಹೆಚ್ಚಿಸಲು ಈ ಶಿಕ್ಷಣ ಸಂಸ್ಥೆ ಕನ್ನಡಿಗರಿಗೆ ಒಂದು ಪ್ರಬಲವಾದ ಶಕ್ತಿಯಾಗಿ ರೂಪಗೊಂಡಿತು. ಇಂತಹ ಮಹಾನ್ ಸಂಸ್ಥೆಯನ್ನು ಹುಟ್ಟುಹಾಕಿ ಜ್ಞಾನದಾಸೋಹ ಗೈಯುತ್ತ ಸಾಗಿರುವಾಗ ೧೯೮೪ ರಲ್ಲಿ ೩೭ ವರ್ಷ ಹದಿಹರೆಯದ ಯುವಕ ಪ್ರಭಾಕರ ಕೋರೆಯವರು ಅದರ ಕರ್ಣ ಧಾರತ್ವವನ್ನು ಹೆಗಲಿಗೇರಿಸಿಕೊಂಡ ಮೇಲೆ ಸಂಸ್ಥೆಯ ಸ್ವರೂಪವೇ ಬದಲಾಯಿತು. ಕೇವಲ ೩೭ ರಷ್ಟು ಇದ್ದ ಅಂಗಸಂಸ್ಥೆಗಳನ್ನು ಇಂದು ೨೫೦ ಕ್ಕೂ ಹೆಚ್ಚು ವಿವಿಧ ಅಂಗಸಂಸ್ಥೆಗಳನ್ನು ಸ್ಥಾಪಿಸಿ ದೇಶ ವಿದೇಶ ಕೆ.ಎಲ್.ಇ.ಸಂಸ್ಥೆಯ ಕಡೆಗೆ ಮುಖಮಾಡಿವಂತೆ ಮಾಡಿದ್ದಾರೆ. ಇದು ಕೋರೆಯವರ ಚಿಂತನೆಯ ಪ್ರಯೋಗ ಶಾಲೆಯೂ ಆಗಿ ಸಮಾಜಕ್ಕೆ ಉತ್ತಮ ಫಲನೀಡುತ್ತ ಬಂದಿದೆ. ಕೆ.ಎಲ್.ಇ. ಸಾಮ್ರಾಜ್ಯ ವಿಸ್ತರಣೆಯಲ್ಲಿ ಶ್ರೀಕೃಷ್ಣದೇವ ರಾಯನಾಗಿ ಕಾರ್ಯ ನಿರ್ವಹಿಸುತ್ತಿರುವ ಕೋರೆಯವರು ಶಿಕ್ಷಣವನ್ನು ಸಾಮಾನ್ಯೀಕರಣಗೊಳಿಸಿದ್ದಾರೆ. ನರ್ಸರಿ, ಬಾಲವಾಡಿಗಳಿಂದ ಸ್ನಾತಕೋತ್ತರ ಪದವಿತನಕ ಕೃಷಿಯಿಂದ ವೈದ್ಯ ವಿಜ್ಞಾನದತನಕ ಇಲ್ಲಿ ಶಿಕ್ಷಣ ದೊರೆಯುತ್ತದೆ. ಇಂತಹದ್ದು ಇಲ್ಲ ಎನ್ನುವಂತಿಲ್ಲ. ಈಗ ಸ್ವತಂತ್ರ ವಿಶ್ವವಿದ್ಯಾಲಯದ ಗರಿ ಬೇರೆ ಮೂಡಿದೆ. ಕೆ.ಎಲ್.ಇ. ಕನ್ನಡಿಗರ ಪ್ರಾಬಲ್ಯದ ಸಂಕೇತವೂ ಹೌದು. ಇಲ್ಲಿ ಓದಿದ ಮಕ್ಕಳು ಜಗತ್ತಿನ ವಿವಿಧ ಕಡೆಗೆ ದೊಡ್ಡದೊಡ್ಡ ಹುದ್ದೆಗಳಲ್ಲಿದ್ದಾರೆ. ೧೯೮೪ ರಲ್ಲಿ ಕೋರೆ ಆಡಳಿತ ಚುಕ್ಕಾಣಿ ಹಿಡಿದಾಗ ಸಂಸ್ಥೆಯ ಸೇವೆ ಬಹುತೇಕ ಸಾಂಪ್ರದಾಯಿಕ ಶಿಕ್ಷಣಕಷ್ಟೇ ಸೀಮಿತವಾಗಿತ್ತು. ಆದರೆ ಕೋರೆ ಇಂದು ಹೈಟೆಕ್ ಸ್ಪರ್ಷ ನೀಡಿ ಜಾಗತಿಕ ಮಟ್ಟದಲ್ಲಿ ಕೊಂಡೊಯ್ಯುತ್ತ ಸಂಸ್ಥೆಗೆ ಒಂದು ಖದರ್ ತಂದುಕೊಟ್ಟಿರುವರೆಂದು ಹೇಳಿದರೆ ಉತ್ಪ್ರೇಕ್ಷೆಯೆನಲ್ಲ. ಒಟ್ಟು ಅಪ್ರತಿಮ ಸಾಧಕನ ಉತ್ತರ ಕರ್ನಾಟಕದ ಶೈಕ್ಷಣಿಕ ಕ್ರಾಂತಿ ಪುರುಷ ೭೦ ರ ಹರೆಯದ ಡಾ. ಪ್ರಭಾಕರ ಕೋರೆಯವರ ಕುರಿತು ಅವರ ಬಂಧುಬಾಂಧವರು ಆಪ್ತಮಿತ್ರರು ನಾಡಿನ ಹೆಸರಾಂತ ಮಠಾಧೀಶರು ಶ್ರೇಷ್ಠ ರಾಜಕಾರಣಿಗಳು ಹೆಸರಾಂತ ಸಾಹಿತಿಗಳು ಅಭಿಮಾನಿಗಳು ಬರೆದ ಮೌಲಿಕ



Scanned by CamScanner

ಲೇಖನಗಳನ್ನು ಸಂಗ್ರಹಿಸಿ ಸಂಪಾದಿಸಿ ಸಾಹಿತ್ಯಾಸಕ್ತರ ಕೈಗೆ '**ಸ್ಪಂದನವೆಂಬ**' ಶೀರ್ಷಿಕೆಯ ಕೃತಿಕುಸುಮವನ್ನು ತುಂಬಾ ಅಚ್ಚುಕಟ್ಟಾಗಿ ಸಂಪಾದಿಸುವಲ್ಲಿ ಡಾ. ಜಗಜಂಪಿಯವರ ಶ್ರಮ ಸಾರ್ಥಕಗೊಂಡಿದೆ.

**ಅರಳು** : ಅಥಣಿ ಎಂದೊಡನೆ ನಮ್ಮೆಲ್ಲರ ಕಣ್ಣಮುಂದೆ ತ್ಯಾಗಮೂರ್ತಿ, ಆಧ್ಯಾತ್ಮ ಜ್ಯೋತಿಯಾದ ಶ್ರೀ ಮುರುಘೇಂದ್ರ ಶಿವಯೋಗಿಗಳ ಬೆಳಕು ಕಾಣುವುದು. ಅಥಣಿ ಮಾನವನ ಆಧ್ಯಾತ್ಮಿಕ ಪುಣ್ಯಭೂಮಿಯಾಗಿದೆ. ಇಲ್ಲಿನ ಮೋಟಗಿಮಠದ ಪೂಜ್ಯರಾದ ಶ್ರೀ ಪ್ರಭು ಚೆನ್ನಬಸವ ಸ್ವಾಮೀಜಿಯವರು ಹಿಂದಿನ ಆಧ್ಯಾತ್ಮ ಶಕ್ತಿಯ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಶ್ರೀಗಳು ಶಿವಯೋಗಮಂದಿರ, ಮೈಸೂರು ಸುತ್ತೂರು ಗುರುಕುಲ, ಮಾನಸಗಂಗೋತ್ರಿಯಲ್ಲಿ ಅಧ್ಯಯನಗಳ ಮೂಲಕ ಜ್ಞಾನಸಂಪಾದಿಸಿ ವಚನ ಸಂಕಲನ, ಕವನ ಸಂಕಲನ, ಆಧುನಿಕ ವಚನಗಳ ರಚನೆ, ಚಿಂತನೆಗಳ ಪ್ರಕಟಣೆ ಮಾಡಿ ನಾಡಿನ ತುಂಬೆಲ್ಲ ಜನಜಾಗೃತಿಗಾಗಿ ಪಾದಯಾತ್ರೆ, ಪ್ರವಚನ, ದೂರದರ್ಶನ, ಆಕಾಶವಾಣಿಗಳಲ್ಲಿ ಚಿಂತನಗಳ ಪ್ರಸಾರ, ಅಕ್ಷರ ದಾಸೋಹದಂತಹ ಪವಿತ್ರ ಕಾರ್ಯದ ಮೂಲಕ ಸಾವಿರಾರು ಮಕ್ಕಳಿಗೆ ಅನ್ನ, ಅಕ್ಷರ,ಅನುಭಾವದ ದಾಸೋಹ ಮಾಡುವುದರ ಮೂಲಕ ಸಮಾಜೋ-ಧಾರ್ಮಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ಪೂಜ್ಯರ ಸಾಧನೆ ಹಾಗೂ ಜೀವನ ಕುರಿತು ನಾಡಿನ ಹಲವಾರು ಅಭಿಮಾನಿ ಭಕ್ತರು ಗುರುಹಿರಿಯರು ಬರೆದ ನುಡಿನಮನಗಳನ್ನು 'ಅರಳು' ಕೃತಿಯಲ್ಲಿ ತುಂಬಾ ಚೆನ್ನಾಗಿ ಡಾ. ಬಸವರಾಜ ಜಗಜಂಪಿಯವರು ಪೂಜ್ಯ ಶ್ರೀ ಪ್ರಭು ಚೆನ್ನಬಸವ ಸ್ವಾಮೀಜಿಯವರ ಸಾಹಿತ್ಯದ ವಿವಿಧ ಮುಖಗಳನ್ನು ಅವರ ವ್ಯಕ್ತಿ ಪ್ರತಿಭೆಯನ್ನು ನಾಡಿನ ಜನತೆಗೆ ಪರಿಚಯಿಸುವ ಕಾರ್ಯ ಸ್ತುತ್ಯಾರ್ಹವಾದುದು. ೨೦೦೩ ರಲ್ಲಿ ೬೭ ಲೇಖನಗಳ ಕೃತಿ ರತ್ನಇದಾಗಿದೆ ಮಾಳಿ ಹಾಗೂ ಡಾ. ಬಸವರಾಜ ಜಗಜಂಪಿಯವರ ಸಂಪಾದಕತ್ವದಲ್ಲಿ ಮೂಡಿಬಂದ ಈ ಗ್ರಂಥ ಅಥಣಿ ಮೋಟಗಿ ಮಠದ ಪರಮಪೂಜ್ಯರಾದ ಶ್ರೀ ಪ್ರಭು ಚೆನ್ನಬಸವ ಶ್ರೀಗಳಿಗೆ ಸಲ್ಲಿಸಿದ ಅಭಿನಂದನಾ ಗ್ರಂಥ ಇದಾಗಿದೆ.

**ಗುಣಾರ್ಣವ** : ಜಿಲ್ಲಾ ಹಿರಿಯ ನ್ಯಾಯಾಧೀಶರಾಗಿ ಅತ್ಯಂತ ಪ್ರಾಮಾಣಿಕವಾಗಿ, ನಿಷ್ಠೂರವಾಗಿ, ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತದಿಂದ ನ್ಯಾಯ ನಿರ್ಣಯ ಮಾಡಿ ತಮ್ಮ ಸೇವಾವಧಿಯಲ್ಲಿ ಹಲವಾರು ವ್ಯಾಜ್ಯಗಳನ್ನು ಅತ್ಯಂತ ಸುಸೂತ್ರವಾಗಿ ಪರಿಹರಿಸಿ ನ್ಯಾಯಾಲಯದ ಬಗ್ಗೆ ಅಪಾರ ಗೌರವವನ್ನು, ಶ್ರದ್ಧೆಯನ್ನು ಇಟ್ಟುಕೊಂಡ ನಾಡಿನ ಜನತೆಗೆ ನ್ಯಾಯಾಲಯದ ಬಗ್ಗೆ ಗೌರವ ಹೆಚ್ಚುವಂತೆ ಆತ್ಮ ವಿಶ್ವಾಸ ಮೂಡಿಸಿದ ಮಹಾನುಭಾವರು ಕವಿ ಹೃದಯಿಗಳು ಆದ ಹಿರಿಯ ಚೇತನ ಶ್ರೀ ಜಿನದತ್ತ ದೇಸಾಯಿಯವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಕುರಿತು ಅವರ ಅಭಿಮಾನಿಗಳು, ಹಿತೈಷಿಗಳು, ಬಂಧುಗಳು, ಸ್ನೇಹಿತರು ಬರೆದು ಅರ್ಪಿಸಿದ ನುಡಿಮುತ್ತುಗಳ ಲೇಖನ ಸಂಗ್ರಹಗಳ ಗ್ರಂಥ "ಗುಣಾರ್ಣವ" ವನ್ನು ನಾಡಿನ ಹೆಸರಾಂತ ಸಾಹಿತಿಗಳಾದ ಡಾ. ಬಸವರಾಜ ಜಗಜಂಪಿಯುವರು ತುಂಬಾ ಸುಂದರವಾಗಿ, ಅಚ್ಚುಕಟ್ಟಾಗಿ ಸಂಪಾದಿಸಿ ಗುಣಾರ್ಣವ ಕೃತಿಯನ್ನು ಲೋಕಾರ್ಪಣೆ ಮಾಡಿದ ಸಂತೃಪ್ತಿ ಅವರಿಗಿದೆ.

**ಹಿಂದಣ ಹೆಜ್ಜೆ** : ಶ್ರೀ ಮ.ನಿ.ಪ್ರ ಶ್ರೀ ನಾಗನೂರ ರುದ್ರಾಕ್ಷಿ ಮಠದ ಪೂಜ್ಯ ಶ್ರೀ ಶಿವಬಸವ ಮಹಾಸ್ವಾಮಿಗಳಲ್ಲಿ ಕಲ್ಯಾಣದೃಷ್ಟಿಶಿವನೂ, ಕಾಯಕನಿಷ್ಠೆಯುಬಸವನೂ ಸಂಗಮಿಸಿ ಇವರು ಶ್ರೀ ಶಿವಬಸವ ಮಹಾಸ್ವಾಮಿಗಳಾಗಿಹರು. ಸೇವಾಧರ್ಮವೇ ಇವರ ಜೀವನ ಮರ್ಮವು ಇವರ ಪರಿಶುದ್ಧ ಆಚಾರ, ಉಚ್ಚವಿಚಾರ, ಪವಿತ್ರಚಾರಿತ್ರ್ಯ, ಅನನ್ಯಭಕ್ತಿ, ಅಪ್ರತಿಮದಾಸೋಹಭಾವ, ಅನುಪಮಸೇವೆ ಅವಿಚಲಕಾಯಕನಿಷ್ಠೆ, ಅಚಲಸಂಯಮಶೀಲತೆ, ಸರ್ವಭೂತದಯಾದೃಷ್ಟಿ, ವಿಶ್ವಮಾನವದೃಷ್ಟಿ ಈ ಎಲ್ಲ ಪವಿತ್ರ ಗುಣಗಳಿಂದ ಸಾಕಾರಗೊಂಡು ನಾಡಿನ ತುಂಬೆಲ್ಲ ಇವರ ಹೆಸರು ಜನರ ಮನದಾಳದಲ್ಲಿ ಚಿರಸ್ಥಾಯಿಯಾಗಿ ನೆಲೆಸಿತು. ಇಂತಹ ಶಿಕ್ಷಣ ಪ್ರೇಮಿ ದಾಸೋಹ ಮೂರ್ತಿಗಳು ಆದ ಬೆಳಗಾವಿಯ ಪೂಜ್ಯ ಶ್ರೀ ಶಿವಬಸವ ಮಹಾಸ್ವಾಮಿಗಳ ಕುರಿತು ನೂರಾರು ಜನ ಭಕ್ತರು, ಅಪಾರ ಶಿಷ್ಯಬಳಗವು ನಾಡಿನ ಹರಚರಗುರುಮೂರ್ತಿಗಳು ಪೂಜ್ಯರ ಕುರಿತು ನುಡಿನಮನಗಳನ್ನು ಗುರುಚರಣಕ್ಕೆ ಸಮರ್ಪಿಸಿದ್ದಾರೆ. ಆ ನುಡಿಮುತ್ತುಗಳನ್ನು ಆಯ್ದು ಡಾ ಜಗಜಂಪಿಯವರು ತುಂಬಾ ಸುಂದರವಾಗಿ ಪೋಣಿಸಿ ಸಂಗ್ರಹಿಸಿ ಸಂಪಾದಿಸಿ ಆ ಕೃತಿಕುಸುಮವನ್ನು ಭಕ್ತಸಮೂಹಕ್ಕೆ ಸಮರ್ಪಿಸಿ ಕೃತಾರ್ಥರಾಗಿದ್ದಾರೆ. ಲಿಂಗೈಕ್ಯ ಪೂಜ್ಯ ಶ್ರೀ ಶಿವಬಸವ ಸ್ವಾಮಿಗಳ ೧೨೫ ನೇ ಜಯಂತಿ ನಿಮಿತ್ಯ ೧೨೫ ಲೇಖನಗಳಿಂದ ೨೦೧೪ ರಲ್ಲಿ ಈ ಕೃತಿ ಬೆಳಕು ಕಂಡಿತು.

ಹೀಗೆ ಜಗಜಂಪಿಯವರು ಹಲವಾರು ಕೃತಿಗಳ ಸಂಪಾದನೆ ಮಾಡಿದ್ದಾರೆ,ನೂರಾರು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಸಾವಿರಾರು ವಿದ್ವತ್‌ಪೂರ್ಣ ಉಪನ್ಯಾಸ ನೀಡಿದ್ದಾರೆ. ಅನೇಕ ವ್ಯಕ್ತಿ ಚಿತ್ರಗಳನ್ನು ಬರೆದು ವ್ಯಕ್ತಿ ಚಿತ್ರಗಳ ಚಿತ್ರಗುಪ್ತರೆನಿಸಿದ್ದಾರೆ.



Scanned by CamScanner

**ನಾಡನುಡಿಸೇವೆ :** ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯತ್ವ, ಅಖಿಲಭಾರತ ವೀರಶೈವ ಮಹಾಸಭೆಯ ನಿರಂತರ ಸದಸ್ಯತ್ವ, ಧಾರವಾಡ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯತ್ವ ಪ್ರೊ. ಸಂ. ಶಿ. ಭೂಸನೂರಮಠರ ಪ್ರತಿಷ್ಠಾನದ ಆಜೀವ ಸದಸ್ಯರಾಗಿ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ, ಎಸ್.ಡಿ. ಇಂಚಲ್ ಸ್ಮಾರಕ ಸಮಿತಿಯ ಕಾರ್ಯಾಧ್ಯಕ್ಷರಾಗಿ ಆನಂದಕಂದ ಟ್ರಸ್ಟಿನ ಸದಸ್ಯರಾಗಿ ಬೆಳಗಾವಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಕವನ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರಾಗಿ, ಬಸವ ಪುರಸ್ಕಾರ ಆಯ್ಕೆ ಸಮಿತಿ ಸದಸ್ಯರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕಗಳ ಆಯ್ಕೆ ಸಮಿತಿ ಸದಸ್ಯರಾಗಿ, ನಾಟಕ ಅಕಾಡೆಮಿ ಪುಸ್ತಕಗಳ ಬಹುಮಾನ ಆಯ್ಕೆ ಸಮಿತಿ ಸದಸ್ಯರಾಗಿ, ಜಾನಪದ ಅಕಾಡೆಮಿ ಪುಸ್ತಕಗಳ ಬಹುಮಾನದ ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ.

**ಪ್ರಶಸ್ತಿ ಪುರಸ್ಕಾರಗಳು :** ಜಗಜಂಪಿಯವರ ನಾಡುನುಡಿ, ಸಾಹಿತ್ಯ ಸಂಸ್ಕೃತಿ, ಶಿಕ್ಷಣ, ಸಮಾಜ, ಧಾರ್ಮಿಕ, ಒಟ್ಟು ಸೇವೆಯನ್ನು ಅನುಲಕ್ಷಿಸಿ ಹಲವಾರು ಪ್ರಶಸ್ತಿಗಳು, ಗೌರವಾದರಗಳು ಇವರನ್ನು ಅರಸಿಕೊಂಡು ಬಂದಿವೆ.

**ನಾಡೋಜ ಪ್ರಶಸ್ತಿ :** ಬೆಳಗಾವಿಯ ನಾಡೋಜ ಪತ್ರಿಕೆಯ ಬಳಗದವರು ಜಗಜಂಪಿಯವರು ಶಿಕ್ಷಣಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗಮನಿಸಿ ನಾಡೋಜ ಪ್ರಶಸ್ತಿಯನ್ನು ಹಾಗೂ ಐದುಸಾವಿರ [೫೦೦೦] ನಗದು ಹಣವನ್ನು ನೀಡಿ ಪುರಸ್ಕರಿಸಿದ್ದಾರೆ.

**ಚೆನ್ನಶ್ರೀ ಪುರಸ್ಕಾರ :** ಸವದತ್ತಿಯ ಶ್ರಿ ಚೆನ್ನಪ್ಪ ಯರಗಣವಿ ಪ್ರತಿಷ್ಠಾನದಿಂದ ಸಾಹಿತ್ಯ ಮತ್ತು ಸಮಾಜ ಸೇವೆಗಾಗಿ ಚೆನ್ನಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

**ಪರಿಮಳ :** ಇದು ಪ್ರತಿಷ್ಠಿತ ಪ್ರಶಸ್ತಿಯಾಗಿದೆ. ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಹೆಸರಿನಲ್ಲಿ ಕೊಡಲ್ಪಡುವ ಇದು ಬ್ರಾಹ್ಮಣ ಸಮಾಜದವರಿಂದ ಪುರಸ್ಕೃತವಾದದ್ದು ಪ್ರಶಸ್ತಿ ಹಾಗೂ ೫೦೦೦/– ನಗದು ಹಣವನ್ನು ಹೊಂದಿರುವ ಈ ಪ್ರಶಸ್ತಿಯ ಮೊದಲಿಗರು ಡಾ. ಬಸವರಾಜ ಜಗಜಂಪಿಯವರು.

ಅಂತರ್ ರಾಷ್ಟ್ರೀಯ ಜೈಂಟ್ಸ್‌ಕ್ಲಬ್ ಪ್ರಶಸ್ತಿ : ಜಗಜಂಪಿಯವರ ಒಟ್ಟು ಜೀವಮಾನ ಸಾಧನೆಗೆ ನೀಡಿದ ಗೌರವ ಉಡುಪಿಯಲ್ಲಿ ಈ ಸಮಾರಂಭ ಜರುಗಿತು. ಅಲ್ಲಿಯೇ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಅಂತರ್ ರಾಷ್ಟ್ರೀಯ ಲೈನ್ಸ್‌ಕ್ಲಬ್‌ದಿಂದ ಪುರಸ್ಕಾರ : ಕರ್ನಾಟಕ ಹಾಗೂ ಮಹಾರಾಷ್ಟ್ರದ ಎರಡೂ ರಾಜ್ಯದವರು ಸೇರಿ ಜಗಜಂಪಿಯವರು ಗಡಿಭಾಗದಲ್ಲಿ ಸಲ್ಲಿಸಿದ ಸಾಹಿತ್ಯ ಸಮಾಜ ಧಾರ್ಮಿಕ ಸೇವೆಯನ್ನು ಗುರುತಿಸಿ ಪ್ರೀತಿಯಿಂದ ಅಭಿಮಾನದಿಂದ ಈ ಗೌರವವನ್ನು ನೀಡಿ ಅಭಿನಂದಿಸಿದ್ದಾರೆ.

ಇವುಗಳಲ್ಲದೇ ಸವದತ್ತಿಯ ಕಲ್ಮಠ ಹಾಗೂ ಜಮಖಂಡಿಯ ಓಲೆಮಠದವರು ಇನ್ನೂ ಹಲವಾರು ಸಂಘಸಂಸ್ಥೆಯವರು ಮಠಾಧೀಶರು ಇವರಿಗೆ ಪ್ರಶಸ್ತಿ ಗೌರವಗಳನ್ನು ನೀಡಿ ಅಭಿನಂದಿಸಿದ್ದಾರೆ. ಪ್ರಶಸ್ತಿಗಳನ್ನು ಎಂದೂ ಇವರು ಬಯಸಿದವರಲ್ಲ ಹುಡುಕಿಕೊಂಡು ಹೋದವರಲ್ಲ ಪ್ರಶಸ್ತಿಗಳು ತಾವಾಗಿಯೇ ಇವರನ್ನು ಹುಡುಕಿಕೊಂಡು ಬಂದಿವೆ. ಪ್ರಶಸ್ತಿಗಳಿಂದ ಇವರ ಗೌರವ ಹೆಚ್ಚಾಗಿಲ್ಲ ಇವರಿಂದ ಪ್ರಶಸ್ತಿಗಳ ಗೌರವ ಹೆಚ್ಚಾಗಿದೆ. ಇಂತಹ ಬಹುಮುಖ ಪ್ರತಿಭೆಯ ನಿಸ್ಪೃಹ ವ್ಯಕ್ತಿತ್ವದ ನಿಷಕಲ್ಮಷ ಮನಸ್ಸಿನ ಸದಾ ವಿನಮ್ರತೆಯಿಂದ ಮುಗಿದ ಕೈ ಬಾಗಿದ ಶಿರ ವಿನೀತ ಭಾವದ ಡಾ. ಬಸವರಾಜ ಜಗಜಂಪಿಯವರ ಕುರಿತಾದ ಕೆಲವು ಮಾತುಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವ ಒಂದು ಚಿಕ್ಕ ಪ್ರಯತ್ನ ಇದಾಗಿದೆ.

■

---

ಬಿ.ಎಲ್.ಡಿ.ಇ.ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಬಸವನ ಬಾಗೇವಾಡಿ
ಮೊ. ನಂ – ೯೯೦೨೪೯೫೬೯೫



Scanned by CamScanner

RNI Regd. No. KARBIL/2014/54464



लोग अच्छे तर्क से नहीं
निर्णित तथ्य से सन्तुष्ट होते हैं
लोग विवेक से नहीं
अन्धी श्रद्धा से नत होते हैं
लोग न्याय से नहीं
शक्ति से प्रसन्न होते हैं
आतंक से प्रीत करते हैं
वे आदमी नहीं
हीरो माँगते हैं
वे सत्य को नहीं समझते
परिणति को समझते हैं
और फिर उसे
स्वयं सिद्धि मानकर
स्वीकारते सराहते हैं

- गिरिजाकुमार माथुर

ಜನರು ಒಳ್ಳೆಯ ವಿಚಾರಗಳಿಂದಲ್ಲ
ನಿರ್ಣಯವಾದ ಸತ್ಯದಿಂದ ಸಂತೃಪ್ತರಾಗುತ್ತಾರೆ
ಜನ ವಿವೇಕದಿಂದಲ್ಲ
ಅಂಧ ವಿಶ್ವಾಸಕ್ಕೆ ತಲೆ ಬಾಗುತ್ತಾರೆ
ಜನ ನ್ಯಾಯದಿಂದಲ್ಲ
ಶಕ್ತಿಗೆ ಪ್ರಸನ್ನರಾಗುತ್ತಾರೆ
ಭಯಕ್ಕೆ ಪ್ರೀತಿಸುತ್ತಾರೆ
ಅವರು ಮನುಷ್ಯರಲ್ಲ
ನಾಯಕರನ್ನು ಬೇಡುತ್ತಾರೆ
ಅವರು ಸತ್ಯವನ್ನು ತಿಳಿದುಕೊಳ್ಳುವದಿಲ್ಲ
ಪರಿಣಾಮ ತಿಳಿದುಕೊಳ್ಳುತ್ತಾರೆ
ಮತ್ತು ಅದಕ್ಕೆ
ಸ್ವಯಂ ಸಿದ್ಧಿಯಂದು ತಿಳಿದು
ಸ್ವೀಕರಿಸುತ್ತಾ ಗುಣಗಾನ ಮಾಡುತ್ತಾರೆ

– ಗಿರಿಜಾಕುಮಾರ ಮಾಥುರ

ISSN 2320-0391

सौम्य प्रकाशन
'कबीर कुंज' महाबलेश्वर कॉलनी,
दर्गा जेल के सामने,
विजयपुर - 586103 (कर्नाटक)

सौ

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

Scanned by CamScanner